ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 | ಸಂಚಿಕೆ 38 | ಸೆಪ್ಟೆಂಬರ್ 21, 1980 | ಬೆಲೆ : 50 ಪೈಸೆ

ಬರಗಾಲ

ಕರ್ನಾಟಕ ರಾಜ್ಯದ ಹದಿನಾಲ್ಕು ಜಿಲ್ಲೆಗಳಲ್ಲಿ ಇನ್ನು ಕೆಲವು ದಿನಗಳೊಳಗೆ ಮಳೆ ಬಂದಿಲ್ಲವಾದರೆ ಜನರಿಗೆ ಜೀವನ ಮಾಡುವುದೇ ದುಸ್ಸರವಾದೀತೆಂದು ರಾಜ್ಯ ರೆವಿನ್ಯೂ ಮಂತ್ರಿ ಬಂಗಾರಪ್ಪನವರು ಹೇಳಿದ್ದಾರೆ ಎಂಬುದಾಗಿ ಪತ್ರಿಕಾ ವರದಿಯಾಗಿದೆ. ಹಾಗೆಯೇ ಬರಗಾಲ ಪೀಡಿತ ಪ್ರದೇಶದ ಜನರಿಗೆ ಪರಿಹಾರ ಒದಗಿಸಲು ತಮ್ಮ ಸರಕಾರ ಎಲ್ಲಾ ಕ್ರಮವಹಿಸುತ್ತಿದೆ ಎಂದಿರುವರು. ಆದರೆ ಸಚಿವರು ಯಾವ ರೀತಿಯ ಪರಿಹಾರ ಕ್ರಮವೆಂಬುದನ್ನು ನಿರ್ದಿಷ್ಟವಾಗಿ ಹೇಳಿಲ್ಲ.

ಕೋಲಾರ ಜಿಲ್ಲೆಯಾದ್ಯಂತ, ಮೈಸೂರು ಮತ್ತು ತುಮಕೂರು ಜಿಲ್ಲೆಗಳ ಹಲವೆಡೆ, ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಈಗಲೇ ಜೀವನ ದುಸ್ಸರವಾಗಿದೆ. ಸ್ವಾತಂತ್ರ್ಯಾನಂತರ ದೇಶವನ್ನು ಆಳಿಕೊಂಡು ಬಂದ ಪಕ್ಷಗಳು ಅನುಸರಿಸಿಕೊಂಡು ಬಂದ ಬಂಡವಾಳಶಾಹಿ ಪಥದ ಪರಿಣಾಮವಾದಿ ರೈತರೂ, ಹಳ್ಳಿಯ ಬಡವರೂ ಅತ್ಯಂತ ಕಷ್ಟಪಡುತ್ತಿರುವಾಗ, ಮಳೆಯಿಲ್ಲದೆ ಉಂಟಾಗುವ ಬರಗಾಲದಂತಹ ಪರಿಸ್ಥಿತಿಯು ಜೀವನವನ್ನೇ ದುಸ್ಸರವಾಡಿದೆ. ಹಾಗಿದ್ದರೂ ಈತನಕ ರಾಜ್ಯಸರಕಾರ ಈ ಪ್ರದೇಶಗಳ ಜನರಿಗೆ ತಾತ್ಕಾಲಿಕ ಪರಿಹಾರ ಒದಗಿಸಲು ಯಾವುದೇ ನಿರ್ದಿಷ್ಟ ಕ್ರಮ ತೆಗೆದುಕೊಂಡಿಲ್ಲ. ಜನತೆಗೆ ಪರಿಹಾರ ಒದಗಿಸುವ ಬದಲು ಆಳುವ ಪಕ್ಷದಲ್ಲಿ ಒಳಜಗಳ ಮತ್ತು ಅಧಿಕಾರ ಹಾಗೂ ಲಾಭಕ್ಕಾಗಿ

ಸಂಪಾದಕೀಯ

ಕಚ್ಚಾಟವೇ ಜಾಸ್ತಿಯಾಗಿದೆ. ಗುಂಡೂರಾಯರ ಫೈಲು ವಿಲೇವಾರಿ ಕಾರ್ಯಕ್ರಮಗಳಂತಹ ನಾಟಕಗಳಿಂದ ಜನತೆಗೆ ಸಿಗಬೇಕಾದ ಪರಿಹಾರ ಸಿಗಲಾರದು. ಈಗಾಗಲೇ ಎಚ್ಚೆತ್ತಿರುವ ರೈತರು ಸರಕಾರದ ಗಮನವನ್ನು ಬರಗಾಲ ಪೀಡಿತ ಪ್ರದೇಶದತ್ತ ಒಯ್ದು, ಪರಿಹಾರ ದೊರಕಿಸಲು ಹೋರಾಟ ಪ್ರಾರಂಭಿಸಿದ್ದಾರೆ. ಕೋಲಾರ ಜಿಲ್ಲೆಯಂತಲ್ಲಿ ಎಲ್ಲಾ ವಿರೋಧ ಪಕ್ಷಗಳ ಪ್ರತಿನಿಧಿಗಳು ಸೇರಿ ಸರಕಾರದ ಮೇಲೆ ಒತ್ತಾಯ ತರಲು ಕಾರ್ಯಕ್ರಮ ಯೋಚಿಸುತ್ತಿದ್ದಾರೆ. ಬಿಜಾಪುರ ಮತ್ತು ಇನ್ನಿತರೆಡೆಗಳಲ್ಲೂ ಇದು ಪ್ರಾರಂಭವಾದಿದೆ.

ಬರಗಾಲ ಪೀಡಿತ ಪ್ರದೇಶದ ಜನರಿಗೆ ತಾತ್ಕಾಲಿಕ ಪರಿಹಾರದತ್ತ ಮಾತ್ರ ಯೋಚಿಸಿದರೆ ಸಾಲದು. ಈ ಪ್ರದೇಶಗಳಲ್ಲಿ ಕನಿಷ್ಟ ನೀರಾವರಿ ಸೌಲಭ್ಯಗಳನ್ನು ಒದಗಿಸುವುದು ಮತ್ತು ಬರಗಾಲದ ಪರಿಸ್ಥಿತಿ ಬರುವ ಮೊದಲೇ ಕೆಲವೊಂದು ತಾತ್ಕಾಲಿಕ ಪರಿಹಾರ ಕಾರ್ಯಗಳನ್ನು ಮುಂದಾದಿ ನಡೆಸುವಂತಹ ದೀರ್ಘಕಾಲಿಕ ಮತ್ತು ತತ್‌ಕ್ಷಣದ ಸಮಸ್ಯೆಗಳನ್ನು ಪರಿಹಾರ ಮಾಡುವಂತಹ ಸಮಗ್ರ ಯೋಜನೆಯನ್ನು ಕಾರ್ಯಗತಗೊಳಿಸಬೇಕು. ಸದ್ಯದ ಸಮಸ್ಯೆಗಳ ಬಗ್ಗೆ ಪರಿಹಾರಕ್ಕಾಗಿ ಒತ್ತಾಯಿಸುವುದರೊಂದಿಗೆ, ದೀರ್ಘಕಾಲಿಕ ಪರಿಹಾರ ಯೋಜನೆಯನ್ನು ಹಾಕಿ ಕಾರ್ಯಗತಗೊಳಿಸುವಂತೆ ನಮ್ಮನ್ನಾಳುವ ರಾಜ್ಯ ಮತ್ತು ಕೇಂದ್ರ ಸರಕಾರಗಳನ್ನು ಒತ್ತಾಯಿಸಬೇಕು. ●

ಕಾಂ. ಎ. ಕೆ. ನಾರಾಯಣ ಇನ್ನಿಲ್ಲ

ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಮಿಕ ಚಳುವಳಿಯ ಸ್ಥಾಪಕ ಮುಂದಾಳುಗಳಲ್ಲೊಬ್ಬರೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ದ. ಕ. ಜಿಲ್ಲಾ ಸಮಿತಿಯ ಸದಸ್ಯರೂ ಆದ ಕಾಂ. ಎ. ಕೆ. ನಾರಾಯಣ ಅವರು ತಾ. 15-9-1980 ರಂದು ಬೆಳಿಗ್ಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

1937ರಲ್ಲಿ ಮಂಗಳೂರಿನಲ್ಲಿ ಪ್ರೆಸ್ ಕಾರ್ಮಿಕರ ಸಂಘದ ಮುಖಂಡನಾಗಿ ತನ್ನ ಟ್ರೇಡ್‌ಯೂನಿಯನ್ ಚಟುವಟಿಕೆಯನ್ನು ಆರಂಭಿಸಿದ ಕಾಮ್ರೇಡ್ ಎ. ಕೆ. ಕಳೆದ ನಲವತ್ತಮೂರು ವರ್ಷಗಳಿಂದ ಜಿಲ್ಲೆಯ ಕಾರ್ಮಿಕ ಚಳುವಳಿಯಲ್ಲಿ ಅವಿಶ್ರಾಂತವಾಗಿ ದುಡಿದು, ತ್ಯಾಗ ಮನೋಭಾವ, ಅಪ್ರತಿಮ ಧೈರ್ಯ ಮತ್ತು ಮಾರ್ಕ್ಸ್‌ವಾದ – ಲೆನಿನ್‌ವಾದದ ಮೇಲಿನ ಅಚಲ ನಿಷ್ಠೆಯಲ್ಲಿ ಯುವ ಪೀಳಿಗೆಗೆ ಆದರ್ಶಪ್ರಾಯರಾದಿದ್ದಾರೆ. 1937ರ ಕಾಲಘಟ್ಟದಲ್ಲಿ ಟ್ರೇಡ್‌ಯೂನಿಯನ್ ಸಂಘಟನೆ ಕಟ್ಟಿ ಬೆಳೆಸುವುದು ಸುಲಭದ ಕೆಲಸವಾಗಿರಲಿಲ್ಲ. ಬ್ರಿಟಿಷ್ ಸಾಮ್ರಾಜ್ಯಶಾಹಿ ಸರಕಾರದ ಕ್ರೂರ ದಬ್ಬಾಳಿಕೆಯನ್ನೂ ಸ್ವದೇಶೀ ಬಂಡವಾಳಶಾಹಿಗಳ ಪ್ರಬಲ ವಿರೋಧವನ್ನೂ ಎದುರಿಸುತ್ತಾ, ಪ್ರತಿ ಕ್ಷಣವೂ ತನ್ನ ಪ್ರಾಣವನ್ನೇ ಪಣವಾಗಿಟ್ಟು ಅವರು ಸಂಘಟನೆ ಕಟ್ಟಿದರು. 1937ರಲ್ಲಿ ಪ್ರಥಮ ಜೈಲುವಾಸ. 1949ರಲ್ಲಿ ಕಮ್ಯುನಿಸ್ಟ್ ಪಾರ್ಟಿಯು ನಿಷೇಧಕ್ಕೊಳಗಾದಾಗ ಕಾಮ್ರೇಡ್ ಎ. ಕೆ ಯವರು ಬಂಧಿಸಲ್ಪಟ್ಟು ಆರು ತಿಂಗಳು ಜೈಲುವಾಸವನ್ನನುಭವಿಸಿದರು. 1965 ರಿಂದ 1968ರ ತನಕ ಅವರು ಚಿಕ್ಕಮಗಳೂರಿನಲ್ಲಿ ತೋಟ ಕಾರ್ಮಿಕರ ಸಂಘಟನೆಯಲ್ಲಿ ದುಡಿದರು. ದ. ಕ. ಜಿಲ್ಲೆಯ ಮೋಟಾರು ಕಾರ್ಮಿಕರ ನೆಚ್ಚಿನ ನಾಯಕರಾದ ಕಾಮ್ರೇಡ್ ಎ. ಕೆ., ಕೊನೆಯವರೆಗೂ ಮೋಟಾರ್ ಅಂಡ್ ಎಂಜಿನಿಯರಿಂಗ್ ವರ್ಕರ್ಸ್ ಯೂನಿಯನಿನ ಪ್ರಧಾನಕಾರ್ಯದರ್ಶಿಯಾಗಿದ್ದರು. ಕಳೆದ ವರ್ಷದವರೆಗೆ ಅವರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮಂಗಳೂರು ನಗರ ಸಮಿತಿಯ ಕಾರ್ಯದರ್ಶಿಯಾದಿದ್ದರು. ತೀವ್ರ ಅನಾರೋಗ್ಯದ ನಿಮಿತ್ತ ಅವರು ಈ ಜವಾಬ್ದಾರಿಯನ್ನು ಬಿಡಬೇಕಾಯಿತು. ಅವರು ಕ್ಯಾಶ್ಯೂ ಅಂಡ್ ಅಲ್ಯೈಡ್ ವರ್ಕರ್ಸ್ ಯೂನಿಯನಿನ ಕಾರ್ಯದರ್ಶಿಯೂ ಆಗಿದ್ದರು. ಅವರು 1 68ರಲ್ಲಿ ಮಂಗಳೂರು ನಗರಸಭಾ ಸದಸ್ಯರಾಗಿ ಚುನಾಯಿತರಾದಿ ಸೇವೆ ಸಲ್ಲಿಸಿದರು. ಕಾಂ. ಎ. ಕೆ. 1970ರಿಂದ ನಿಧನದವರೆಗೆ ಸಿ. ಐ. ಟಿ. ಯು. ಕರ್ನಾಟಕ ರಾಜ್ಯಸಮಿತಿಯ ಸದಸ್ಯರಾಗಿದ್ದರು.

ಕಾಮ್ರೇಡ್ ಎ.ಕೆ. ಯವರ ಅಂತಿಮ ಯಾತ್ರೆಯಲ್ಲಿ ಸಾವಿರಾರು ಮಂದಿ ಕಾರ್ಮಿಕರೂ, ವಿದ್ಯಾರ್ಥಿಗಳೂ, ಮಧ್ಯಮ ವರ್ಗದ ನೌಕರರೂ ಮತ್ತು ಇತರ ಅಭಿಮಾನಿಗಳೂ, ಗಣ್ಯ ನಾಗರಿಕರೂ ಭಾಗವಹಿಸಿದರು. ಸಾವಿರಾರು ಸ್ತ್ರೀ ಮಜೂರರು ಮೃತರ ಅಂತಿಮ ದರ್ಶನಕ್ಕಾಗಿ ಬಂದು ನೆರೆದಿದ್ದರು. ಅಂತಿಮ ಗೌರವವನ್ನರ್ಪಿಸಲು ಬಂದ ಗಣ್ಯವ್ಯಕ್ತಿಗಳಲ್ಲಿ ವಿಧಾನ ಪರಿಷತ್ ಸದಸ್ಯ ಮತ್ತು ಮಾಜಿ ನಗರ ಸಭಾಪತಿ ಶ್ರೀ ಬ್ಲೇಸಿಯಸ್ ಡಿ. ಸೋಜ, ವಿಧಾನಸಭಾ ಸದಸ್ಯ ಮತ್ತು ಸಿ.ಪಿ.ಐ.

[ಕಡೆಯ ಪುಟ ನೋಡಿ]

"ರಾಜ್ಯದಲ್ಲಿ ಪರ್ಯಾಯದತ್ತ ಮೊದಲ ಹೆಜ್ಜೆ"

ಪ್ರಗತಿಪರ ಜನತಂತ್ರರಂಗ ರಚಿಸಲು ಸಿದ್ಧತೆ

ಜನತೆಗೆ ಬಹಳಷ್ಟು ಆಶ್ವಾಸನೆಗಳನ್ನಿತ್ತು ಕೇಂದ್ರದಲ್ಲೂ, ಅಮೇಲೆ ಹಲವು ರಾಜ್ಯಗಳಲ್ಲೂ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರಕಾರದ ವಿಫಲತೆಯಿಂದಾಗಿ ಜನತೆಯಲ್ಲಿ ಭ್ರಮನಿರಸನವಾಗ ತೊಡಗಿದೆ. ಗಗನಕ್ಕೇರಿರುವ ಬೆಲೆಗಳು, ಹದಗೆಡುತ್ತಿರುವ ಕಾನೂನು ಮತ್ತು ವ್ಯವಸ್ಥೆ, ಹೆಚ್ಚುತ್ತಿರುವ ನಿರುದ್ಯೋಗ, ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದೆ ಮತ್ತು ಸಾಲಗಳಿಂದ ರೈತರು ದಿವಾಳಿಯಾಗುತ್ತಿರುವುದು, ಹಳ್ಳಿಯ ಬಡವರ ಸಂಕಷ್ಟ, ಹೆಚ್ಚುತ್ತಿರುವ ಕೋಮು ಗಲಭೆ ಮತ್ತು ವಿಚ್ಛಿದ್ರಕಾರಕ ಚಟುವಟಿಕೆ–ಇವೆಲ್ಲವುಗಳಿಂದ ಜನತೆ ಕಂಗೆಟ್ಟಿದೆ. ಜನತೆಯ ಅತೃಪ್ತಿಯು ಕಟ್ಟೆಯೊಡೆದು, ತಾವೇ ಹೋರಾಟಕ್ಕೆ ಧುಮುಕುತ್ತಲಿದ್ದಾರೆ. ಈ ಪರಿಸ್ಥಿತಿಯಲ್ಲಿ ಜನತೆಗೆ ಕೊಟ್ಟ ಆಶ್ವಾಸನೆ ಈಡೇರಿಸುವ ಬದಲು, ಜನತೆಯ ಪ್ರಜಾಪ್ರಭುತ್ವ ಹಕ್ಕುಗಳನ್ನೇ ಕಸಿಯುವ ಯತ್ನಗಳು ನಡೆಯುತ್ತಿವೆ ಈ ಪರಿಸ್ಥಿತಿಯಲ್ಲಿ ರಾಷ್ಟ್ರಮಟ್ಟದಲ್ಲಿ ಒಂದು ಪರ್ಯಾಯವನ್ನು ಒದಗಿಸುವತ್ತ ಚಿಂತನೆ ನಡೆಯುತ್ತಿದ್ದು. ಈ ದಿಸೆಯಲ್ಲಿ ಈಗಾಗಲೇ ರಾಷ್ಟ್ರಮಟ್ಟದಲ್ಲಿ ಕಾಂಗ್ರೆಸ್ (ಯು), ಸಿ ಪಿ. ಐ (ಎಂ), ಸಿ ಪಿ ಐ, ಲೋಕದಳ, ಆರ್. ಎಸ್. ಪಿ. ಮತ್ತು ಫಾರ್ವರ್ಡ್ ಬ್ಲಾಕ್ ಪಕ್ಷಗಳು ಒಂದಾಗಿ ಹೋರಾಡಲು ಮುಂದೆ ಬಂದಿರುವುದು ಸ್ವಾಗತಾರ್ಹ.

ರಾಷ್ಟ್ರಮಟ್ಟದ ಸಮಸ್ಯೆ ಮತ್ತು ಸ್ಥಳೀಯ ಸಮಸ್ಯೆಗಳಿಂದ ಕರ್ನಾಟಕ ರಾಜ್ಯದಲ್ಲಂತೂ ಜನಜೀವನ ಹದಗೆಡುತ್ತಿದೆ. ಸರಕಾರವೇ ಇಲ್ಲದಂತಹ ಪರಿಸ್ಥಿತಿ ಇದ್ದು, ಇತ್ತೀಚಿನ ದಿನಗಳಲ್ಲಿ ರೈತರೂ, ಕಾರ್ಮಿಕರೂ, ಇತರ ವಿಭಾಗದ ಜನರೂ ಹೋರಾಟದ ಪಥವನ್ನು ಅನುಸರಿಸಿದ್ದಾರೆ. ರಾಷ್ಟ್ರಮಟ್ಟದ ಬೆಳವಣಿಗೆಗಳನ್ನು ಗಮನದಲ್ಲಿರಿಸಿಕೊಂಡು, ಕರ್ನಾಟಕ ರಾಜ್ಯದಲ್ಲಿ ಜನರ ತತ್‌ಕ್ಷಣದ ಸಮಸ್ಯೆಗಳನ್ನೂ ಜನಕೀಯ ಚಳುವಳಿಗಳನ್ನೂ ನಡೆಸಿ ಪರಿಹಾರ ಒದಗಿಸಲು ಮತ್ತು ರಾಜ್ಯದಲ್ಲಿ ಆಳುವ ಕಾಂಗ್ರೆಸ್ ಪಕ್ಷಕ್ಕೆ ಒಂದು ಪರ್ಯಾಯ ಒದಗಿಸುವತ್ತ ಪ್ರಜಾಪ್ರಭುತ್ವ, ಜಾತ್ಯಾತೀತ ಮತ್ತು ಸಮಾಜವಾದಿ ಎಡ ಶಕ್ತಿಗಳನ್ನು ಕಾರ್ಯಕ್ರಮಗಳ ಆಧಾರದ ಮೇಲೆ ಒಂದೆಡೆ ಸೇರಿಸಿ ಮುನ್ನಡೆಯಲು ಸಾಧ್ಯವಾಗುವಂತೆ ಮಾಡಲು ಸಮಾನ ಅಭಿಪ್ರಾಯಗಳುಳ್ಳ ಪಕ್ಷ ಮತ್ತು ವ್ಯಕ್ತಿಗಳ ಸಭೆಯು 16-9-80ರಂದು ಸೇರಿತ್ತು. ಶ್ರೀಮಾನ್ ಡಿ. ಬಿ. ಚಂದ್ರೇಗೌಡರ ಅಧ್ಯಕ್ಷತೆಯಲ್ಲಿ ಸೇರಿದ್ದ ಈ ಸಭೆಯಲ್ಲಿ ಕಾಂಗ್ರೆಸ್ (ಯು), ಸಿ. ಪಿ ಐ (ಮಾರ್ಕ್ಸಿಸ್ಟ್), ಸಿ.ಪಿ.ಐ., ಲೋಕದಳ ಪಕ್ಷಗಳ ಪ್ರತಿನಿಧಿಗಳೂ, ಪಕ್ಷೇತರರೂ ಮತ್ತು ರಾಷ್ಟ್ರೀಯ ಕಾರ್ಮಿಕ ಸಂಘಗಳಾದ ಎಚ್. ಎಂ. ಎಸ್., ಸಿ. ಐ. ಟಿ. ಯು. ಮತ್ತು ಎ. ಐ. ಟಿ ಯು. ಸಿ. ಪ್ರತಿನಿಧಿಗಳು ಕೂಡ ಭಾಗವಹಿಸಿದ್ದರು.

ಈ ಸಭೆಯಲ್ಲಿ ರಾಷ್ಟ್ರದ ಆರ್ಥಿಕ, ಸಾಮಾಜಿಕ, ರಾಜಕೀಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದ ಪರಿಸ್ಥಿತಿಯನ್ನು ಚರ್ಚಿಸಲಾಯ್ತು. ರಾಜ್ಯದ ಜನತೆಯನ್ನು ಬಾಧಿಸುತ್ತಲಿರುವ ಮುಖ್ಯ ಪ್ರಶ್ನೆಗಳನ್ನು ಮುಂದಿಟ್ಟು, ಕಾರ್ಯಕ್ರಮಗಳ ಆಧಾರದ ಮೇಲೆ ರಾಜ್ಯದಾದ್ಯಂತ ಜನತೆಯನ್ನು ಸಂಘಟಿಸಿ ಎಚ್ಚರಿಸಿ, ಹೋರಾಡಬೇಕೆಂದು ನಿರ್ಣಯಿಸಲಾಯಿತು. ಈ ದಿಸೆಯಲ್ಲಿ ಯೋಜನೆ ಹಾಕಲು ಪ್ರಜಾಪ್ರಭುತ್ವ, ಜಾತ್ಯಾತೀತ ಮತ್ತು ಸಮಾಜವಾದಿ ಎಡ ಶಕ್ತಿಗಳ ನೇತೃತ್ವದಲ್ಲಿ ರಾಜ್ಯಮಟ್ಟದ ಸಮಾವೇಶವೊಂದನ್ನು ಮುಂದಿನ ನವೆಂಬರ್‌ನಲ್ಲಿ ಸೇರಿಸಬೇಕೆಂದೂ, ರಾಜ್ಯದಾದ್ಯಂತ ಪ್ರವಾಸಮಾಡಿ ಜನತೆಗೆ ತಿಳುವಳಿಕೆ ನೀಡಬೇಕೆಂದೂ ಈ ಕೆಲಸವನ್ನು ಸಂಘಟಿಸಲು ಶ್ರೀ ಡಿ. ಬಿ. ಚಂದ್ರೇಗೌಡರ ಸಂಚಾಲಕತ್ವದಲ್ಲಿ ಒಂದು ಸಮನ್ವಯ ಸಮಿತಿಯನ್ನು ರಚಿಸಲು ತೀರ್ಮಾನಿಸಲಾಯಿತು. ಈ ಸಮನ್ವಯ ಸಮಿತಿಯಲ್ಲಿ ಕಾಂಗ್ರೆಸ್

[ಕಡೆಯ ಪುಟ ನೋಡಿ]

ಅಸ್ಸಾಂ: ಚಳುವಳಿಯ ಬೆಂಬಲಿಗರಿಂದ ಹಿಂಸಾಚಾರ

ಆಗಸ್ಟ್ 18ರಂದು ಭಾರತ ಸರಕಾರದ ಪ್ರತಿನಿಧಿಗಳು ಮತ್ತು ಅಖಿಲ ಅಸ್ಸಾಂ ವಿದ್ಯಾರ್ಥಿ ಸಂಘ, ಗಣಸಂಗ್ರಾಮ ಪರಿಷತ್ತುಗಳ ನಡುವೆ ನಡೆದ ಶಿಲ್ಲಾಂಗ್ ಮಾತುಕತೆಗಳು ವಿಫಲವಾದೊಡನೆ, ಒಪ್ಪಂದಕ್ಕೆ ಸಿದ್ಧವಿಲ್ಲದ ಚಳುವಳಿಯ ನಾಯಕರ ಧೋರಣೆಯ ಬಗ್ಗೆ ಟೀಕೆಯು ಕ್ರಮೇಣ ಹೆಚ್ಚುತ್ತಿದೆ.

ಶಿಲ್ಲಾಂಗ್ ಮಾತುಕತೆಗಳಲ್ಲಿ ಮಣಿಪುರದ ಮುಖ್ಯಮಂತ್ರಿ ದೊರೇಂದ್ರ ಸಿಂಗ್ ಅವರೂ ಇರಬೇಕೆಂದು ನಾಯಕರು ಪಟ್ಟುಹಿಡಿದಿರುವುದನ್ನೂ ಅನೇಕರು ಟೀಕಿಸಿದ್ದಾರೆ. ಮಣಿಪುರದ ಮುಖ್ಯಮಂತ್ರಿ ಒಂದು ಹೇಳಿದರೆ ಅವರ ಸಹಾಯಕ ರೈಸಿಂಗ್ ಕೈಸಿಂಗ್ ಸಾರ್ವಜನಿಕವಾಗಿ ಅದಕ್ಕೆ ವ್ಯತಿರಿಕ್ತವಾಗಿ ಇನ್ನೊಂದು ಹೇಳಿ, ಮಣಿಪುರದಲ್ಲಿ "ವಿದೇಶಿ ಪ್ರಜೆ"ಗಳ ವಿಚಾರ ಈಗಾಗಲೇ ತೀವ್ರ ಸಮಸ್ಯೆಯಾಗಿದೆ.

ಇದರ ಜೊತೆಗೆ, ಅಖಿಲ ಮಣಿಪುರ ವಿದ್ಯಾರ್ಥಿ ಸಂಘದ ಚಳುವಳಿಗಾರರು ಹ್ಮಾರ್ ಬುಡಕಟ್ಟು ಕೋಮಿನವರನ್ನು "ವಿದೇಶಿಯ"ರೆಂದು ಲೆಕ್ಕಹಾಕಿದ್ದಾರೆ ಎಂದು ಅಖಿಲ ಮಣಿಪುರ ಬುಡಕಟ್ಟು ವಿದ್ಯಾರ್ಥಿಗಳು ವಿಚಿತ್ರ ಹೇಳಿಕೆ ಕೊಟ್ಟಿದ್ದಾರೆ! ದೊರೇಂದ್ರ ಸಿಂಗ್ ಸರ್ಕಾರ ಬುಡಕಟ್ಟು ವಿರೋಧಿಯಾಗಿದೆ ಎಂದು ಬುಡಕಟ್ಟು ವಿದ್ಯಾರ್ಥಿಗಳು ಆಪಾದಿಸಿ, ಪ್ರಧಾನಮಂತ್ರಿಗೆ ಒಂದು ಮನವಿ ಸಲ್ಲಿಸಿದ್ದಾರೆ.

ಅಸ್ಸಾಂನ ವಿದೇಶಿ ರಾಷ್ಟ್ರೀಯರ ವಿಚಾರವನ್ನು ಪರಿಹರಿಸುವಾಗ ಅಂಥ ಮನುಷ್ಯನೊಬ್ಬನನ್ನು ಮಧ್ಯವರ್ತಿಯಾಗಿಟ್ಟುಕೊಳ್ಳಲು ಅಸ್ಸಾಂ ಚಳುವಳಿ ನಾಯಕರು ಯಾಕೆ ಒತ್ತಾಯಿಸುತ್ತಿದ್ದಾರೆ ಎಂದು ಅನೇಕರು ಪ್ರಶ್ನಿಸುತ್ತಿದ್ದಾರೆ.

ಅಲ್ಲದೆ ಶಾಲೆಗಳ ಪುನರಾರಂಭ, ವಿಶ್ವವಿದ್ಯಾಲಯದ ಪರೀಕ್ಷೆಗಳ ಪುನರಾರಂಭ ಇವುಗಳಿಗೆ ಚಳುವಳಿಯ ನಾಯಕರು ಯಾಕೆ ಅನುಮತಿ ಕೊಡುತ್ತಿಲ್ಲ ಎಂದೂ ಅನೇಕರು ಟೀಕಿಸುತ್ತಿದ್ದಾರೆ. ಚಳುವಳಿಯ ಉಗ್ರ ಬೆಂಬಲಿಗರನೇಕರು ತಮ್ಮ ಸ್ವಂತ ಮಕ್ಕಳಿಗೆ ಶಿಕ್ಷಣ ನಿಲ್ಲದಿರಲೆಂದು ಬೇರೆ ರಾಜ್ಯಗಳಿಗೆ ಕಳುಹಿಸಿದ್ದಾರೆಂದು ಅನೇಕ ಪತ್ರಿಕೆಗಳಲ್ಲಿ ಬಹಿರಂಗ ಸುದ್ದಿ ಬಂದಿದೆ. ಇತರರಿಗೆ ಒಂದು ಶಿಕ್ಷಣ ವರ್ಷದ ನಷ್ಟ ಈಗಾಗಲೇ ದುಬಾರಿಯೆನಿಸಿದೆ,

ವಿದ್ಯಾರ್ಥಿಗಳ ಮಧ್ಯೆ ಪ್ರವೇಶ :

ಇಂಥ ಪರಿಸ್ಥಿತಿಯಲ್ಲಿ ವಿದ್ಯಾಸಂಸ್ಥೆಗಳ ಪುನರಾರಂಭದ ಬೇಡಿಕೆಯನ್ನು ಕುರಿತು ಚರ್ಚಿಸಲು ಎಸ್.ಎಫ್.ಐ. ಪಿ.ಡಿ.ಎಸ್.ಎಫ್. ಮತ್ತಿತರ ಎಡಪಂಥೀಯ ವಿದ್ಯಾರ್ಥಿ ಸಂಘಟನೆಗಳು ಆಗಸ್ಟ್ 17ರಂದು ಒಂದು ಜಂಟಿ ಸಮಾವೇಶ ಕರೆದಿದ್ದವು. ಇದನ್ನು ಪೋಲೀಸರ ಸಹಾಯ ಪಡೆದ ಗೂಂಡಾಗಳು ಕೆಡಿಸಿದರು.

ಎಸ್.ಎಫ್.ಐ; ಎ.ಐ.ಎಸ್.ಎಫ್; ಪಿ.ಎಸ್.ಯು., ಡಿ.ಎಸ್.ಓ. ಗಳು ಇನ್ನೊಂದು ಕಡೆ ಸಭೆಸೇರಿ, ಶಾಲೆಗಳ ಪುನರಾರಂಭ ಆಗಲೆಂದು ಕರೆಕೊಟ್ಟರು.

ಅಖಿಲ ಅಸ್ಸಾಂ ಬುಡಕಟ್ಟು ವಿದ್ಯಾರ್ಥಿಗಳ ಸಂಘ ಮತ್ತು ಅಖಿಲ ಬೋರೋ ವಿದ್ಯಾರ್ಥಿಗಳ ಸಂಘದವರು ಆಗಸ್ಟ್ 25ರಂದು ಗೌಹಾಟಿಯಲ್ಲಿ ಜಂಟಿಯಾಗಿ ಪ್ರದರ್ಶನ ನಡೆಸಿ, ಶಾಲೆಗಳ ಪುನರಾರಂಭವನ್ನು ಒತ್ತಾಯಿಸಿದರು. ಒಂದು ಸಾವಿರ ಬುಡಕಟ್ಟು ವಿದ್ಯಾರ್ಥಿಗಳು, ಹುಡುಗಿಯರು, ಯುವಕರು ಬೀದಿಗಳಲ್ಲಿ ಪ್ರದರ್ಶನ ನಡೆಸಿದರೆ, ಎ.ಎ.ಎಸ್.ಯು. ಮತ್ತು ಜಿ.ಎಸ್.ಪಿ. ಗಳು ಒಂದು ಮೈಲು ದೂರದಲ್ಲಿ ಇದಕ್ಕೆ ಪ್ರತಿಪ್ರದರ್ಶನ ನಡೆಸಿದವು. ಮೆರವಣಿಗೆ ನಡೆದನಂತರ ಬುಡಕಟ್ಟು ವಿದ್ಯಾರ್ಥಿಗಳ ಸಭೆ ನಡೆಯಿತು. ಇದರಲ್ಲಿ ಎಸ್. ಎಫ್. ಐ., ಎ.ಐ.ಎಸ್.ಎಫ್., ಎ.ಎ.ಎಂ.ಎಸ್.ಯು. ಮುಂತಾದ ಸೋದರ ಆಹ್ವಾನಿತರು ಭಾಗವಹಿಸಿದ್ದರು.

ಅಖಿಲ ಅಸ್ಸಾಂ ಅಲ್ಪಸಂಖ್ಯಾತ ವಿದ್ಯಾರ್ಥಿಗಳ ಸಂಘವೂ ಕೂಡ ಶಾಲೆಗಳ ಪುನರಾರಂಭಕ್ಕೆ ಒತ್ತಾಯಿಸಿದೆ

ಈ ಮಧ್ಯದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಕಮ್ಯುನಿಸ್ಟ್ ಪಕ್ಷ, ಕಾಂಗ್ರೆಸ್ (ಯು), ಆರ್.ಎಸ್.ಪಿ., ಆರ್.ಸಿ.ಪಿ.ಐ., ಎಸ್.ಯು.ಸಿ. ಮತ್ತು ಲೋಕದಳಗಳ ಎಡ ಪಕ್ಷಗಳ ವೇದಿಕೆಯ ಪ್ರಚಾರಗಳು ಈಗ ತುಂಬ ಪ್ರಭಾವ ಬೀರುತ್ತಿವೆ. ಈ ಎಡ ಪಕ್ಷಗಳ ಪ್ರೇರಣೆಯ ಮೇರೆಗೆ ತೈಲ ನಗರವಾದ ಶಿವಸಾಗರದಲ್ಲಿ ಆಗಸ್ಟ್ 22ರಂದು ದೊಡ್ಡ ರ್‍ಯಾಲಿ ನಡೆಸಲಾಯಿತು. ಇದರ ನಂತರ ತೀನ್‌ಸುಕಿಯಾನಲ್ಲಿ 7000 ಮಂದಿಯ ರ್‍ಯಾಲಿ ನಡೆದು ಇದರಲ್ಲಿ 4000 ಸಂಘಟಿತ ಕಾರ್ಮಿಕರು ಭಾಗವಹಿಸಿದ್ದರು. ಈ ರ್‍ಯಾಲಿಗಳಲ್ಲಿ ಎಡ ಪಕ್ಷಗಳ ನಾಯಕರು ಮಾತನಾಡಿ, ಮಾತುಕತೆಗಳು ಯಾವ ಪೂರ್ವಕರಾರೂ ಇಲ್ಲದೆ ಶುರುವಾಗಬೇಕು, ದಿಗ್ಬಂಧನ ನಿಲ್ಲಬೇಕು, ಶಾಲೆಗಳು ಆರಂಭವಾಗಬೇಕು ಮತ್ತು ಶಾಂತ ಪರಿಸ್ಥಿತಿ ಹಿಂತಿರುಗಬೇಕು ಎಂದು ಒತ್ತಾಯಿಸಿದರು.

ದಿಬ್ರುಗರ್‌ನಲ್ಲಿ ನಡೆದ ಸಭೆಯನ್ನು ಕದಡಲು ಚಳುವಳಿಕಾರರು ಯತ್ನಿಸಿದರು. ಕುರ್ಚಿಗಳ ಎಸೆದಾಟ ಮತ್ತು ಕಿಟಕಿಗಾಜುಗಳನ್ನು ಒಡೆದದ್ದಕ್ಕಾಗಿ ಪೋಲೀಸರು ಕೆಲವರನ್ನು ಬಂಧಿಸಿದರು. ಎಲ್ಲ ಅಡೆತಡೆಗಳಿದ್ದರೂ ಎಡ ಪಕ್ಷದ ನಾಯಕರು ಸಭೆ ನಡೆಸಿದರು,

ಪಕ್ಷದ ಮೇಲೆ ಹಲ್ಲೆ :

ವಿಪರೀತ ಟೀಕೆಗಳನ್ನು ಎದುರಿಸುತ್ತಿರುವ ಅಖಿಲ ಅಸ್ಸಾಂ ವಿದ್ಯಾರ್ಥಿ ಸಂಘ ಮತ್ತು ಗಣಸಂಗ್ರಾಮ ಪರಿಷತ್‌ಗಳ ಬೆಂಬಲಿಗರು, ಮಾರ್ಕ್ಸ್‌ವಾದಿ ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳ ಮೇಲೆ ತಮ್ಮ ಪ್ರಚಾರ ಮತ್ತು ಗೂಂಡಾ ಹಲ್ಲೆಗಳನ್ನು ಹೆಚ್ಚು ತೀವ್ರಗೊಳಿಸಿದ್ದಾರೆ.

ಆಗಸ್ಟ್ 21ರಂದು, ನೌಗಾಂಗ್ ಪಟ್ಟಣದಲ್ಲಿ ಆ ಜಿಲ್ಲೆಯ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ವಿಧಾನ ಸಭೆ ಸದಸ್ಯರಾದ ಎಪ್ಪತ್ತು ವರ್ಷಗಳ ಹಿರಿಯ ಬೀರೇಶ್ ಮಿಶ್ರಾ ಅವರ ಮೇಲೆ ಹಲ್ಲೆ ನಡೆಸಲಾಯಿತು. ದೊಡ್ಡ ಕೋಲಿನಿಂದ ಅವರನ್ನು ಥಳಿಸಲಾಗಿದೆ. ಮಿಶ್ರಾ ಅವರನ್ನು ರಕ್ಷಿಸಲೆತ್ನಿಸಿದ ನೌಗಾಂಗ್ ಜಿಲ್ಲಾ ಸಮಿತಿ ಕಾರ್ಯದರ್ಶಿಯವರು ಕೂಡ ಏಟು ತಿಂದರು.

ನಾದಿಯಾ, ದೂಮ್‌ಡೂಮಾ ಮತ್ತು ಗೋರೇಶ್ವರಗಳ ಪಕ್ಷದ ಕಚೇರಿಗಳನ್ನು ಆಕ್ರಮಿಸಿ ದಾಳಿಮಾಡಲಾಗಿದೆ. ಕಾಮರೂಪ್‌ನಲ್ಲಿ ಅನೇಕ ಕಾಮ್ರೇಡುಗಳ ಮೇಲೆ ಹಲ್ಲೆ ನಡೆಸಲಾಗಿದೆ.

ಗೌಹಾಟಿಯ ಮುಖ್ಯ ಅಂಚೆ ಕಚೇರಿಯ ರಿಕ್ರಿಯೇಷನ್ ಹಾಲ್‌ನಲ್ಲಿ ಆಗಸ್ಟ್ 28ರಂದು ನಡೆಯುತ್ತಿದ್ದ ಅಂಚೆ ತಂತಿ ಉದ್ಯೋಗಿಗಳ ಸಭೆಯ ಮೇಲೆ ದುಷ್ಕರ್ಮಿಗಳು ಹಲ್ಲೆ ನಡೆಸಿ ಅನೇಕ ಸದಸ್ಯರನ್ನು ಗಾಯಗೊಳಿಸಿದ್ದಾರೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹೇಳಿಕೆ :

ಸಿ.ಪಿ.ಐ.(ಎಂ)ನ ಅಸ್ಸಾಂ ರಾಜ್ಯ ಸಮಿತಿಯು ಪರಿಸ್ಥಿತಿಯನ್ನು ಪರಿಶೀಲಿಸಿ, ಆಗಸ್ಟ್ 29 ರಂದು ಒಂದು ಹೇಳಿಕೆ ಕೊಟ್ಟಿದ್ದಾರೆ. ಎ.ಎ.ಎಸ್.ಯು., ಜಿ.ಎಸ್.ಪಿ. ಮತ್ತು ಸರ್ಕಾರದ ಪ್ರತಿನಿಧಿಗಳ ನಡುವಿನ ಶಿಲ್ಲಾಂಗ್ ಮಾತುಕತೆಗಳು ವಿದೇಶೀಯ ಸಮಸ್ಯೆ ಚರ್ಚೆಯಾಗುವುದಕ್ಕೆ ಮುನ್ನವೇ ವಿಫಲವಾದುದಕ್ಕೆ ತೀವ್ರ ವಿಷಾದ ಮತ್ತು ಕಳವಳವನ್ನು ವ್ಯಕ್ತಪಡಿಸಿದೆ.

ಅಸ್ಸಾಂನ ಜನತೆ ಅಪೇಕ್ಷಿಸಿದ್ದ ಸಂಧಾನ ಮತ್ತು ಒಪ್ಪಂದಗಳ ಪ್ರಯತ್ನಗಳನ್ನು ತಳ್ಳಿಹಾಕಲು ಚಳುವಳಿಯ ನಾಯಕರು ಮುಂದು ಮಾಡಿರುವ ಕಾರಣಗಳು ಸರ್ವಥಾ ಸಮರ್ಥನೀಯವಲ್ಲ. ಒಪ್ಪಂದವನ್ನು ಬಯಸದ ಶಕ್ತಿಗಳು, ತಮ್ಮ ಗೋಪ್ಯ ಉದ್ದೇಶಗಳಿಗೋಸ್ಕರ ಈ ಚಳುವಳಿಯನ್ನು ಮುಂದುವರೆಸಿ, ಅಶಾಂತಿ ಮತ್ತು ಅಶಿಸ್ತನ್ನು ಉಂಟುಮಾಡಲು ಇಚ್ಛಿಸಿ, ಮಾತುಕತೆಗಳನ್ನು ಕೆಡಿಸುವುದರಲ್ಲಿ ಯಶಸ್ವಿಯಾಗಿವೆ.

ಈ ವೈಫಲ್ಯದ ಹೊಣೆಯಿಂದ ಸರ್ಕಾರವೂ ಜಾರಿಕೊಳ್ಳುವಂತಿಲ್ಲ. ಇಂಥ ಸಂಕೀರ್ಣ ಪರಿಸ್ಥಿತಿಯಲ್ಲಿ, ತಳಹದಿ ನಿರ್ಮಾಣವನ್ನು ಮಣಿಪುರದ ದೊರೇದ್ರಸಿಂಗ್ ಮಾಡಬೇಕೆಂದು ಅದು ಬಯಸಿದ್ದು ಸಮರ್ಥನೀಯವಲ್ಲ. ಹಾಗೆ ನೋಡಿದರೆ ಇದು ಇನ್ನಷ್ಟು ಸಿಕ್ಕುಗಳನ್ನು ತಂದೊಡ್ಡಿತು.

ತೀರ್ಮಾನಕ್ಕೆ ಕರೆ :

ಆದಷ್ಟು ಬೇಗ ಮತ್ತೆ ಸಭೆ ನಡೆಸಿ, ವಿದೇಶಿ ಪ್ರಜೆಗಳ ವಿಚಾರವನ್ನು ಇತ್ಯರ್ಥಗೊಳಿಸಬೇಕೆಂದು ರಾಜ್ಯಸಮಿತಿಯು ಚಳುವಳಿಯ ನಾಯಕರು ಮತ್ತು ಸರ್ಕಾರಕ್ಕೆ ಮನವಿ ಮಾಡುತ್ತದೆ. ಸಂವಿಧಾನದ ಚೌಕಟ್ಟಿನಲ್ಲಿ ತೀರ್ಮಾನವನ್ನು ಕೈಗೊಳ್ಳಲಾಗುವುದೆಂದು ಹೇಳಿ, ಪೂರ್ವ ಕರಾರುಗಳಿಲ್ಲದೆ ಮಾತುಕತೆಗೆ ಮನವಿ ಮಾಡಿರುವ ಪ್ರಧಾನ ಮಂತ್ರಿಗಳ ಹೇಳಿಕೆಯನ್ನು ಸಮಿತಿ ಸ್ವಾಗತಿಸುತ್ತದೆ. ಶಾಂತಿಯುತ ಮತ್ತು ನ್ಯಾಯಬದ್ಧ ತೀರ್ಮಾನಕ್ಕಾಗಿ, ಎಲ್ಲಾ ರಾಜಕೀಯ ಪಕ್ಷಗಳು ಸೂಚಿಸುವ ಆಧಾರವನ್ನೂ ಸಮಿತಿ ಸ್ವಾಗತಿಸಿದೆ. ಈ ನಿಯಮಗಳ ಚೌಕಟ್ಟಿನೊಳಗೆ ಸರಿಯಾದ ತೀರ್ಮಾನವನ್ನು ಕೈಗೊಳ್ಳಬಹುದೆಂದು ರಾಜ್ಯ ಸಮಿತಿ ದೃಢವಾಗಿ ನಂಬಿದೆ.

ತೈಲ ಮತ್ತು ಪ್ಲೈವುಡ್ ಸಾಗಾಣಿಕೆಯ ದಿಗ್ಬಂಧನ ಮುಂದುವರಿಕೆ, ವಿದ್ಯಾಸಂಸ್ಥೆಗಳನ್ನು ಮುಚ್ಚಿರುವುದು, ವಿಶ್ವವಿದ್ಯಾಲಯ ಪರೀಕ್ಷೆಗಳ ನಿಲುಗಡೆ ಇವೆಲ್ಲವೂ ಜನತೆಗೆ ಹೇಳತೀರದಷ್ಟು ಸಮಸ್ಯೆಗಳನ್ನು ತಂದೊಡ್ಡಿವೆ ಎಂದು ರಾಜ್ಯಸಮಿತಿ ವಿಷಾದದಿಂದ ಸೂಚಿಸಿದೆ. 20,000 ಜನ ಪ್ಲೈವುಡ್ ಕೆಲಸಗಾರರು ಕೆಲಸ ಕಳೆದುಕೊಂಡಿರುವುದಲ್ಲದೆ, ಅನೇಕ ಯುವಜನರಿಗೆ ಶಿಕ್ಷಣ ವರ್ಷನಷ್ಟವಾಗಿದೆ. ಜನತೆಯಲ್ಲಿ ಆತಂಕ ಅಸ್ಥಿರತೆ ಉಂಟಾಗಿದೆ. ಎಲ್ಲ ಶಾಲೆಗಳನ್ನು ತೆರೆಯಬೇಕೆಂದು ಪಕ್ಷ ಸಂಬಂಧಿಸಿದವರಿಗೆ ಮನವಿ ಮಾಡುತ್ತದೆ.

ಪ್ಲೈವುಡ್ ದಿಗ್ಬಂಧನ ಕೂಡಲೇ ನಿಲ್ಲಲಿ, ಪ್ಲೈವುಡ್ ಕೈಗಾರಿಕೆಗಳ ಮಾಲೀಕರು ಮುಚ್ಚಿರುವ ಕಾರ್ಖಾನೆ ತೆಗೆಯಲಿ ಎಂದು ಪಕ್ಷ ಮನವಿ ಮಾಡುತ್ತದೆ. ಲಕ್ಷಾಂತರ ಜನರಿಗೆ ದಿನದ ಅನ್ನ ತಪ್ಪಿಹೋಗಿದೆ.

ತೀರ್ಮಾನ ವಿಳಂಬವಾಗುವುದರಿಂದ, ಜನವಿರೋಧಿ ಅಂಶಗಳು ಮತ್ತು ಪ್ರತ್ಯೇಕತಾವಾದಿ ಶಕ್ತಿಗಳು ಜನತೆಯ ನಿರಾಶೆಯ ಲಾಭ ಪಡೆದು, ಭಾರಿ ಪ್ರಮಾಣದಲ್ಲಿ ಭೀಕರ ಚಟುವಟಿಕೆಗಳನ್ನು ನಡೆಸುತ್ತಿವೆ. ಸಂಧಾನ, ಚರ್ಚೆ ಶಾಂತ ಚಳುವಳಿ ಇವುಗಳ ಬದಲು ಬಾಂಬುಗಳು ಮತ್ತು ಗನ್ನುಗಳು ಬರಬೇಕೆಂದು ಹೇಳಲಾಗುತ್ತಿದೆ. ಮುಗ್ಧ ಜನರ ಕೊಲೆಯಾಗಿದೆ.

ಪ್ರತಿಗಾಮಿ ಶಕ್ತಿಗಳು ಈ ಪರಿಸ್ಥಿತಿಯ ಲಾಭ ಪಡೆದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ವಿರುದ್ಧ ಅಪಪ್ರಚಾರ ಆರಂಭಿಸಿದ್ದಾರೆ. ಇತರ ವಾಮಪಕ್ಷಗಳನ್ನೂ ಇವರು ಬಿಟ್ಟಿಲ್ಲ. ಕಿಸಾನ್ ಚಳುವಳಿಯ ನೆಲೆಯಾದ ಜಾಗರಾದಲ್ಲಿ ಇಬ್ಬರು ಪಕ್ಷದ ಕಾರ್ಯಕರ್ತರನ್ನು ಹಾಡೇಹಗಲಿನಲ್ಲಿ ಕೊಲೆ ಮಾಡಲಾಗಿದೆ. ಆರ್. ಎಸ್. ಎಸ್. ಅಂಶಗಳೂ ಈ ದಾಳಿಯಲ್ಲಿ ಪಾಲು ಪಡೆದಿವೆ

ಶೋಷಣೆಯನ್ನು ವಿರೋಧಿಸುವ ಜನರ ಮೇಲೆ ಶೋಷಕ ವರ್ಗಗಳು ಅತಿ ಕೆಟ್ಟ ಮಾದರಿಯ ಕಮ್ಯುನಿಸ್ಟ್ ವಿರೋಧವನ್ನು ಅನುಸರಿಸುತ್ತಿವೆ

ಸಿ.ಪಿ.ಐ.(ಎಂ), ಸಿ.ಪಿ.ಐ. ವಿಧಾನ ಸಭೆ ಸದಸ್ಯರ ಮೇಲೆ ಹಲ್ಲೆ, ಪಕ್ಷದ ಕಾರ್ಯಕರ್ತರು, ಪಕ್ಷದ ಕಚೇರಿ, ಸಭೆಗಳ ಮೇಲೆ ಹಲ್ಲೆ· ಲಬಿಂಪುರ, ದಿಬ್ರುಗರ್ ಮುಂತಾದ ಕಡೆ ಎಲ್ಲಾ ಪಕ್ಷಗಳ ಸಾಮೂಹಿಕ ಸಭೆಗಳ ಮೇಲೆ ದಾಳಿ, ಇವೆಲ್ಲವೂ ಶಾಂತ, ಅಹಿಂಸಾ ಚಳುವಳಿಯ ಹೆಸರಿನಲ್ಲಿ ನಡೆಯುತ್ತಿವೆ.

ಜನತೆಗೆ ರಕ್ಷಣೆ ನೀಡುವುದರಲ್ಲಿ, ಭೀಕರ ಚಟುವಟಿಕೆಗಳನ್ನು ತಡೆಯುವುದರಲ್ಲಿ ವಿಫಲವಾಗಿರುವ ಸರ್ಕಾರವನ್ನು ಸಮಿತಿ ಖಂಡಿಸುತ್ತದೆ. ರಾಜ್ಯಕ್ಕೆ ಇರುವ ಅಪಾಯದ ಬಗ್ಗೆ ಜನತೆಗೆ ಅರಿವು ಮೂಡಿಸಿ, ಅವರ ಮತ್ತು ಧಾರ್ಮಿಕ, ಭಾಷಾ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆಗೆ ಅವರಲ್ಲಿ ಜಾಗೃತಿ ಮೂಡಿಸಿದಾಗ ಇಂಥ ಕೃತ್ಯಗಳು ನಿಲ್ಲುತ್ತವೆ.

ಐಕ್ಯತೆ ಬಲವಾಗಲಿ :

ಪ್ರಜಾಸತ್ತೆ ರಕ್ಷಣೆಗೆ ನಿಂತು, ಪ್ರಜೆಗಳ ಹಕ್ಕುಗಳ ರಕ್ಷಣೆಗೆ ಹೋರಾಡುತ್ತಿರುವ ಎಲ್ಲರನ್ನೂ ಸಮಿತಿ ಅಭಿನಂದಿಸುತ್ತದೆ.

ವಿದೇಶಿ ಪ್ರಜೆಗಳ ಬಗ್ಗೆ ಶಾಂತಿಯುತ ಪರಿಹಾರಕ್ಕಾಗಿ ಜನತೆಯಲ್ಲಿ ಅರಿವು ಮೂಡಿಸುತ್ತಿರುವ ಎಲ್ಲಾ ರಾಜಕೀಯ ಪಕ್ಷಗಳ ಕೆಲಸವನ್ನು ಸಮಿತಿ ಸ್ವಾಗತಿಸುತ್ತದೆ. ಅಸ್ಸಾಂನ ಸದ್ಯದ ವಿಚಾರಗಳು ಮತ್ತು ತುರ್ತಿನ ಆರ್ಥಿಕ ಬೇಡಿಕೆಗಳ ಬಗ್ಗೆ ವಿಶಾಲ ಪ್ರಜಾಪ್ರಭುತ್ವವಾದಿ ಐಕ್ಯತೆಯನ್ನು ಬಲಪಡಿಸಲು ಸಮಿತಿ ಶ್ರಮಿಸುತ್ತದೆ.

ಈ ಹಲ್ಲೆಗಳ ವಿರುದ್ಧ ಜನತೆಯನ್ನು ಎಚ್ಚರಿಸಿ, ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳ ರಕ್ಷಣೆಗೆ ಹೋರಾಡಲು, ಬೆಲೆಏರಿಕೆ ವಿರೋಧ ಮತ್ತು ಪ್ರವಾಹ ಪರಿಹಾರ ಮುಂತಾದುವನ್ನು ನಡೆಸಲು ಎಲ್ಲ ಕಾಮ್ರೇಡುಗಳಿಗೆ ಸಮಿತಿ ಕರೆ ನೀಡುತ್ತದೆ.

○

ಕಣ್ಣಾನ್ನೂರಿಗೆ ಹೋಗಿಬಂದೆ

ನಾನು ಕಣ್ಣಾನೂರು ತಲುಪಿದಾಗ ಬೆಳಿಗ್ಗೆ ಸರಿಯಾಗಿ 6 ಘಂಟೆ. ರಸ್ತೆಯುದ್ದಕ್ಕೂ ಸಿ ಐ.ಟಿ.ಯು. ಜನರಲ್ ಕೌನ್ಸಿಲ್‌ಗೆ ದೇಶದ ವಿವಿಡೆಡೆಗಳಿಂದ ಆಗಮಿಸಿದ ಸಂಗಾತಿಗಳಿಗೆ ಕೆಂಪು ವಂದನೆಗಳನ್ನು ಬರೆದ ಕೆಂಪು ಬ್ಯಾನರ್‌ಗಳು, ನೂರಾರು ಸಾವಿರಾರು ಕೆಂಬಾವುಟಗಳು, ಮಧ್ಯೆ ಮಧ್ಯೆ (ಮನೆಗಳಿರುವಲ್ಲಿ) ತೋರಣಗಳಿಂದ ಅಲಂಕೃತವಾದ ವೃತ್ತಗಳು ಶೋಭಿಸುತ್ತಿದ್ದವು.

ಪಕ್ಷದ ಕೆಲಸವೊಂದರ ಕಾರಣವಾಗಿ ನನಗೆ ಆಕಸ್ಮಿಕವಾಗಿ ಕಣ್ಣಾನೂರನ್ನು ಸಂದರ್ಶಿಸಲು ಅದೂ, ಸಿ ಐ ಟಿ.ಯು. ಜನರಲ್ ಕೌನ್ಸಿಲ್ ನಡೆಯುವಾಗ, ಸಂದರ್ಭ ದೊರೆತಿತ್ತು. ದೇಶದಲ್ಲೇ ಅತೀ ಬಲಿಷ್ಠವಾದ ಮತ್ತು ಸುಸಂಘಟಿತವಾದ ಪಕ್ಷದ ಚಟುವಟಿಕೆ ಈ ಜಿಲ್ಲೆಯಲ್ಲಿದೆ. ಪ್ರತಿಗಾಮಿ ಶಕ್ತಿಗಳನ್ನೆದುರಿಸಿ ತ್ಯಾಗ ಬಲಿದಾನಗಳಿಂದ ಸಂಗಾತಿಗಳು ಇಲ್ಲಿ ಪಕ್ಷವನ್ನು ಬೆಳೆಸಿದ್ದಾರೆ. ಕಾರಣ ಕಣ್ಣಾನೂರನ್ನು ತಲುಪಿದಾಗ ನಾನು ಅನೇಕ ನೆನಪುಗಳಿಂದ ಸ್ವಾಭಾವಿಕವಾಗಿಯೇ ಭಾವುಕನಾಗಿದ್ದೆ.

ಕಣ್ಣಾನೂರು ಬಸ್‌ಸ್ಟಾಂಡ್ ತಲುಪಿದ ತಕ್ಷಣ ಸ್ಥಳದಲ್ಲಿ ಹಾಜರಿದ್ದ ಸ್ವಯಂಸೇವಕ ಸಂಗಾತಿಯೊಬ್ಬನಿಗೆ ನನ್ನನ್ನು ಪರಿಚಯಿಸಿಕೊಂಡಾಗ ನನ್ನನ್ನು ನಮ್ಮ (ಕರ್ನಾಟಕ) ಸಂಗಾತಿಗಳಿರುವಲ್ಲಿ ಕರೆದೊಯ್ದನು. ಪ್ರಾತರ್ವಿಧಿ ಮುಗಿಸಿದ ನಂತರ ಅಚ್ಚುಕಟ್ಟಾಗಿ ಸಿದ್ಧಪಡಿಸಿದ್ದ ಉಪಹಾರ ಗೃಹಕ್ಕೆ ನಮ್ಮನ್ನು ಕರೆದೊಯ್ಯಲಾಯಿತು. ಉಪಹಾರ ಮುಗಿದ ತಕ್ಷಣ ಕಾಂ. ಎ.ಕೆ. ಗೋಪಾಲನ್‌ರ ಸಮಾಧಿ ಸ್ಥಳವನ್ನು ಸಂದರ್ಶಿಸಲು ಬಸ್ಸುಗಳನ್ನು ಮೊದಲೇ ವ್ಯವಸ್ಥೆಗೊಳಿಸಲಾಗಿತ್ತು. ಪ್ರತಿಯೊಂದು ವ್ಯವಸ್ಥೆಯ ಮೇಲ್ವಿಚಾರಣೆ, ಪಕ್ಷದ ಹಿರಿಯ ನಾಯಕ, ಸಿ ಐ ಟಿ ಯು. ಉಪಾಧ್ಯಕ್ಷರಲ್ಲೊಬ್ಬರಾದ ಕಾಂ. ಸಿ. ಕಣ್ಣನ್ ವಹಿಸಿದ್ದರು.

ದೇಶದ ದುಡಿಯುವ ಜನತೆಯನ್ನು ಪ್ರತಿನಿಧಿಸುತ್ತಿದ್ದ ಸಿ. ಐ ಟಿ. ಯು. ಸಂಗಾತಿಗಳು ಕಾಂ. ಎ.ಕೆ.ಜಿ. ಸ್ಮಾರಕವನ್ನು ಸಂದರ್ಶಿಸಲು ಕಾತುರಗೊಂಡಿದ್ದರು. ನಾನು ಮತ್ತು ನಮ್ಮ ಹಿರಿಯ ಸಂಗಾತಿಗಳು ಬಸ್ಸಿನಲ್ಲಿ ಸ್ಥಳಾವಕಾಶ ಮಾಡಿಕೊಂಡೆವು. ನಮ್ಮ ಬಸ್ಸಿನಲ್ಲಿ ಪಶ್ಚಿಮ ಬಂಗಾಲದ, ತಮಿಳುನಾಡಿನ ಅನೇಕ ಹಿರಿಯ ನಾಯಕರು ಇದ್ದರು. ಸರಿಯಾಗಿ ಬೆಳಿಗ್ಗೆ 8-30ಕ್ಕೆ ಕಾಂ ಎ. ಕೆ. ಜಿ. ಜನ್ಮಸ್ಥಳವಾದ "ಪೆರಲಿಸ್ಸೇರಿ"ಗೆ ಧಾವಿಸಿದೆವು. ಕಣ್ಣು ಹಾಯಿಸಿದೆಡೆ ಹಸಿರು, ಅಲ್ಲಲ್ಲಿ ಸಿಕ್ಕುವ ತೊರೆಗಳು, ಪ್ರಶಾಂತ ವಾತಾವರಣ ಮನಸ್ಸಿಗೆ ನೆಮ್ಮದಿ ಉಂಟುಮಾಡಿತ್ತು. ರಸ್ತೆಯುದ್ದಕ್ಕೂ ಹತ್ತಾರು ಚಿಕ್ಕ ಚಿಕ್ಕ ವಾಚನಾಲಯಗಳು ಇರುವುದನ್ನು ನೋಡಿ ಬೆರಗಾದೆ ಕಣ್ಣಾನೂರಿನಿಂದ ಪೆರಲಿಸ್ಸೇರಿವರೆಗಿನ ರಸ್ತೆಯುದ್ದಕ್ಕೂ ಕೆಂಪು ತೋರಣ, ಬಾವುಟಗಳಿಂದ ಅಲಂಕರಿಸಲಾಗಿತ್ತು. ಬಸ್ಸು ನಿಂತಾಗ ಪುಟ್ಟ ಸುಂದರ ಗ್ರಾಮವೊಂದು ನಮ್ಮ ಕಣ್ಣೆದುರಿಗಿತ್ತು. ಬಸ್ಸು ಇಳಿದು ಉಳಿದ ಸಂಗಾತಿಗಳು ನಿಧಾನವಾಗಿ ಸಾಗುತ್ತಿದ್ದ ಕಣ್ಮನಲ್ಲಿ ಸೇರಿಕೊಂಡೆವು. ಕಾಂ. ಪಿ. ಸುಂದರಯ್ಯ, ಕಾಂ. ಸಮರ ಮುಖರ್ಜಿ, ಕಾಂ. ಬಾಲಸುಬ್ರಮಣ್ಯಂ ಇತ್ಯಾದಿ ನಾಯಕರನ್ನೊಳಗೊಂಡ ಅನೇಕ ಸಂಗಾತಿಗಳು, ದುಡಿಯುವ ಜನತೆಯ ಆಪ್ತಮಿತ್ರ, ಮಹಾನ್ ಹೋರಾಟಗಾರ ದಿವಂಗತ ಕಾಂ. ಎ. ಕೆ. ಗೋಪಾಲನ್‌ರಿಗೆ ತಮ್ಮ ಆತ್ಮೀಯ ಪ್ರಣಾಮಗಳನ್ನು ಅರ್ಪಿಸಿದರು. ನನ್ನ ಸರದಿ ಬಂದಾಗ, ನಾನು ಕಣ್ಣಾರೆ ನೋಡದ ಆದರೆ ಅತ್ಯಂತ ಗಾಢವಾಗಿ ಪ್ರೀತಿಸುತ್ತಿದ್ದ ನಾಯಕನಿಗೆ ಶ್ರದ್ಧಾಂಜಲಿ ಅರ್ಪಿಸುವ ಆ ಕ್ಷಣ ನನ್ನನ್ನು ಭಾವಪರವಶನನ್ನಾಗಿ ಮಾಡಿತ್ತು. ಕಾಂ. ಎ. ಕೆ. ಜಿ ಚಿರನಿದ್ರೆಗೈಯ್ಯುತ್ತಿರುವ ಸ್ಥಳದ ಮೇಲೆ ಸ್ಮಾರಕವಾಗಿ ಒಂದು ಸ್ತೂಪವನ್ನು ನಿರ್ಮಿಸಿ ಅದರ ಮೇಲೆ ಕೋಟ್ಯಾಂತರ ರೈತಕಾರ್ಮಿಕರ ಆಶೋತ್ತರದ ಸಂಕೇತವಾದ ಕುಡುಗೋಲು ಮತ್ತು ಸುತ್ತಿಗೆಯ ಚಿಹ್ನೆಯನ್ನು ನಿಲ್ಲಿಸಿ ಸ್ಥಳದ ಸುತ್ತ ಒಂದು ಚಿಕ್ಕ ಕಾಂಪೌಂಡನ್ನು ನಿರ್ಮಿಸಿರುವರು. ಈ ಕಾಂಪೌಂಡಿನ ಪಕ್ಕದಲ್ಲಿ ಒಬ್ಬ ಸಂಗಾತಿ ಕೆಂಪು ಪುಷ್ಪಗಳನ್ನು ಹಿಡಿದುಕೊಂಡು ನಿಂತಿದ್ದನು. ಕೆಂಪು ಪುಷ್ಪಗಳನ್ನು ಸಮಾಧಿಗೆ ಅರ್ಪಿಸಿ, ಕೆಂಪು ವಂದನೆಗಳನ್ನು ಸಲ್ಲಿಸಿದ ನಂತರ ಎಲ್ಲರೂ ಕಾಂ. ಎ.ಕೆ.ಜಿ. ನಿವಾಸ ಸ್ಥಳಕ್ಕೆ ಭೇಟಿಯನ್ನಿತ್ತೆವು. ಚಿಕ್ಕದಾದರೂ ಸುಂದರವಾದ ಆ ಮನೆಯಲ್ಲಿ ಎ ಕೆ.ಜಿ.ಯವರ ಅನೇಕ ಭಾವಚಿತ್ರಗಳಿದ್ದವು ಮನೆಯನ್ನು ಸಂದರ್ಶಿಸಿ ಹೊರಗೆ ಬಂದೆವು.

ಸ್ಮಾರಕದ ಎದುರೇ ಒಂದು ಚಿಕ್ಕ ಸಭೆಯನ್ನು ಏರ್ಪಡಿಸಲಾಗಿತ್ತು. ನೆರೆದಿದ್ದ ಗುಂಪನ್ನು ಉದ್ದೇಶಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್ ಬ್ಯೂರೋ ಸದಸ್ಯ ಕಾಂ. ಸಮರ್ ಮುಖರ್ಜಿ ಯವರು ಕಾಂ. ಎ.ಕೆ.ಜಿ. ಯವರ ಹೋರಾಟದ ಜೀವನಕ್ಕೆ ಸಂಬಂಧಿಸಿದ ಅನೇಕ ಭಾವಪೂರಿತ ಘಟನೆಗಳನ್ನು ಜ್ಞಾಪಿಸಿಕೊಂಡರು. ಹೃದಯಪೂರ್ವಕವಾಗಿ ಬಂದ ಕಾಂ. ಸಮರ್ ಮುಖರ್ಜಿಯವರ ಮಾತುಗಳು ನೆರೆದ ಜನರ ಹೃದಯವನ್ನು ನೇರವಾಗಿ ಸ್ಪಂಧಿಸಿದವು. ನೆರೆದಿದ್ದ ಗುಂಪಿನಲ್ಲಿ ಚಿಕ್ಕ ಚಿಕ್ಕ ಮಕ್ಕಳೂ ಪಾಲ್ಗೊಂಡು ತದೇಕಚಿತ್ತರಾಗಿ ನಾಯಕರ ಮಾತುಗಳನ್ನು ಆಲಿಸುತ್ತಿದ್ದರು. (ನನಗೆ ತಕ್ಷಣ ಬೆಂಗಳೂರಿನಲ್ಲಿ ಗಣಪತಿಯ ವಂತಿಗೆಗಾಗಿ ದಾರಿಹೋಕರನ್ನು ಪೀಡಿಸುತ್ತಿದ್ದ ನಮ್ಮ ಬಾಲಕರು ಜ್ಞಾಪಕಕ್ಕೆ ಬಂದರು) ಪುಟ್ಟದಾಗಿ ನಿರ್ಮಿಸಿದ ವೇದಿಕೆಯ (Pendal) ಮೇಲೆ ಕಾಂ ಸಮರ್ ಮುಖರ್ಜಿ, ಕಾಂ. ಎಂ. ಕೆ. ಪಂಧೆ, ಸಿ ಐ. ಟಿ. ಯು. ನ ಪಶ್ಚಿಮ ಬಂಗಾಲದ ನಾಯಕ ಕಾಂ. ಮಹಮ್ಮದ್ ಇಸ್ಮಾಯಿಲ್, ಕಾಂ. ಬಾಲಸುಬ್ರಮಣ್ಯಂ ಮತ್ತು ಕಾಂ. ಸಿ. ಕಣ್ಣನ್ ಇದ್ದರು. ಗಂಭೀರವದನರಾಗಿ ಕಾಂ. ಸುಂದರಯ್ಯ ನಿಂತಿದ್ದರು. ಎಲ್ಲ ಹಿರಿಯ, ಕಿರಿಯ ಸಂಗಾತಿಗಳೂ ತಮ್ಮ ದುಃಖವನ್ನು ಹತೋಟಿಯಲ್ಲಿಡುವುದಕ್ಕೆ ಯತ್ನಿಸುತ್ತಿರುವುದು ನನಗೆ ಕಂಡುಬಂದಿತು.

ನಂತರ ಭಾರವಾದ ಹೃದಯದಿಂದ ಕಣ್ಣಾನೂರಿಗೆ ವಾಪಸಾದೆವು. 12 ಘಂಟೆಗೆ ಊಟಮುಗಿಸಿ ಸ್ವಲ್ಪ ವಿಶ್ರಾಂತಿ ಪಡೆದು ಸರಿಯಾಗಿ 3 ಘಂಟೆಗೆ ಮೆರವಣಿಗೆ ಹೊರಡಲಿದ್ದ ಕೋಟಾ ಗ್ರೌಂಡಿಗೆ ಬಂದಾಗ ಜಿಲ್ಲೆಯಾದ್ಯಂತದಿಂದ ತಂಡ ತಂಡವಾಗಿ ಕೆಂಬಾವುಟಗಳನ್ನಿಡಿದು ಕಾಲ್ನಡಿಗೆಯಿಂದ, ಬಸ್ಸುಗಳಿಂದ ಜನರು ಸ್ಥಳಕ್ಕೆ ಬಂದಿಳಿಯುತ್ತಿದ್ದರು. ಮೆರವಣಿಗೆ ಪ್ರಾರಂಭವಾದಾಗ 30ಜನ ಸಂಗಾತಿಗಳು ಎತ್ತರವಾದ ಕೆಂಬಾವುಟಗಳನ್ನು ಹಿಡಿದು ಮೆರವಣಿಗೆಯ ಮುಂಚೂಣಿಯಲ್ಲಿದ್ದರು. ನಂತರ ಹಿರಿಯ ನಾಯಕರು (ಕಾಂ. ಪಿ. ರಾಮಮೂರ್ತಿ, ಕಾಂ. ಸಮರ ಮುಖರ್ಜಿ ಇತ್ಯಾದಿ) ಕುಳಿತುಕೊಂಡ ಜೀಪು, ಅದರ ಹಿಂದೆ ಸಿ.ಐ ಟಿ.ಯು. ಜನರಲ್ ಕೌನ್ಸಿಲ್ ಪ್ರತಿನಿಧಿಗಳು, ಅವರ ಹಿಂದೆ ಜಿಲ್ಲೆಯ ನಾನಾ ಕಡೆಯಿಂದ ಉತ್ಸಾಹದಿಂದ ಬಂದ ಕಾರ್ಯಕರ್ತರನ್ನೊಳಗೊಂಡ ತುಂಬಾ ಶಿಸ್ತುಬದ್ಧವಾದ ಮೆರವಣಿಗೆ ನಿಧಾನವಾಗಿ ಚಲಿಸಲಾರಂಭಿಸಿತು. ರಸ್ತೆಯ ಇಕ್ಕೆಲಗಳಲ್ಲಿ, ಮಹಡಿಗಳ ಮೇಲೆ, ಕಂಪೌಂಡ ಗೋಡೆಯ ಮೇಲ್ಗಡೆಯಿಂದ ಕಣ್ಣಾನೂರಿನ ಜನತೆ ಸಿ ಐ.ಟಿ.ಯು. ಪ್ರತಿನಿಧಿಗಳಿಗೆ ಕೆಂಪು ವಂದನೆಗಳನ್ನು ಅರ್ಪಿಸುತ್ತಿದ್ದ ದೃಶ್ಯ ಚೇತೋಹಾರಿಯಾಗಿತ್ತು ಪ್ರತಿನಿಧಿಗಳು ಇದ್ದ ವಿಭಾಗದಲ್ಲಿಯ ಸಂಗಾತಿಗಳು ಬಂಗಾಲಿ, ಹಿಂದಿ, ಪಂಜಾಬಿ ಮತ್ತಿತರ ಭಾಷೆಗಳಲ್ಲಿ ಸ್ಫೂರ್ತಿದಾಯಕ ಘೋಷಣೆಗಳನ್ನು ಕೊಡುತ್ತಲಿದ್ದುದು ಹಾಗೂ ಉಳಿದವರು ಅವರೊಂದಿಗೆ ಪಾಲ್ಗೊಳ್ಳುತ್ತಿದ್ದುದು ಅವಿಸ್ಮರಣೀಯ. ರಸ್ತೆಯ ಬೇರೆ ಬೇರೆ ಕಡೆಗಳಲ್ಲಿ ಅಲಂಕೃತ ಕಮಾನುಗಳನ್ನು ರಚಿಸಿದ್ದ ಬೇರೆ ಬೇರೆ ಸಂಘಟನೆಗಳ ಸಂಗಾತಿಗಳು, ನಾಯಕರು ಹಾಗೂ ಪ್ರತಿನಿಧಿಗಳಿಗೆ ಕೆಂಪುವಂದನೆಗಳನ್ನು ಅರ್ಪಿಸುತ್ತಿದ್ದರು. ಅನೇಕ ಸ್ಥಳಗಳಲ್ಲಿ ಹೆಂಗಳೆಯರು ಮೆರವಣಿಗೆಯ ಮೇಲೆ ಪುಷ್ಪವೃಷ್ಟಿ ಎರಚುತ್ತಿದ್ದರು. ಸುಮಾರು ಒಂದೂ ಕಾಲು ಘಂಟೆಯ ನಂತರ ಮೆರವಣಿಗೆಯ ಮುಂಭಾಗ ಕಣ್ಣಾನೂರಿನ ಪ್ರಸಿದ್ಧ ಸ್ಟೇಡಿಯಂ ಗ್ರೌಂಡನಲ್ಲಿ ಪ್ರವೇಶಿಸಿತು.

ಮೈದಾನದ ಒಂದು ಬದಿಯಲ್ಲಿ ಬೃಹತ್ತಾಗಿ ವೇದಿಕೆಯನ್ನು ರಚಿಸಿದ್ದಿತು. ಬೇರೆ ಬೇರೆ ಭಾಷೆಗಳ ಕ್ರಾಂತಿಕಾರೀ ಗೀತೆಗಳನ್ನು ಹಾಡಿದ ನಂತರ ನೆರೆದಿದ್ದ ಅಪಾರ ಜನಸ್ತೋಮವನ್ನು ಕಾಂ. ಸಿ. ಕಣ್ಣನ್ ಸ್ವಾಗತಿಸಿದರು. ಅಧ್ಯಕ್ಷತೆಯನ್ನು ವಹಿಸಿದ ಕಾಂ. ಸುಶೀಲಾಗೋಪಾಲನ್ ಮಾತನಾಡುತ್ತಾ ದೇಶದ ಪ್ರಸಕ್ತ ಗೊಂದಲಮಯ ಸನ್ನಿವೇಶವನ್ನು ಮಾರ್ಮಿಕವಾಗಿ ನಿರೂಪಿಸಿದರು. ದೇಶದ ಜನತೆಯನ್ನು ಬಾಧಿಸುತ್ತಿರುವ ಹಸಿವು, ಬಡತನ, ನಿರುದ್ಯೋಗಗಳು ತೊಲಗಬೇಕಾದರೆ ಪ್ರಸಕ್ತ ಬಂಡವಾಳಶಾಹಿ ವ್ಯವಸ್ಥೆಯನ್ನು ಬದಲಿಸಿದರೆ ಮಾತ್ರ ಸಾಧ್ಯ ಎಂದರು. ನಂತರ ಮಾತನಾಡಿದ ಅಖಿಲ ಭಾರತ ಸಿ ಐ ಟಿ. ಯು. ಪ್ರಧಾನ ಕಾರ್ಯದರ್ಶಿ ಕಾಂ. ಪಿ. ರಾಮಮೂರ್ತಿ 3-4 ನಿಮಿಷ ಅಚ್ಚಮಲೆಯಾಳಂನಲ್ಲಿ ಮಾತನಾಡಿದ್ದರಿಂದ ನೆರೆದ ಅಪಾರ ಜನಸ್ತೋಮ ಹರ್ಷಿತವಾಯಿತು. ಕಾಂ. ಪಿ. ಆರ್, ಮಾತನಾಡುತ್ತಾ "ಸುಭದ್ರ ಹಾಗೂ ದಕ್ಷ ಸರಕಾರ"ದ ಘೋಷಣೆಯೊಂದಿಗೆ ಅಧಿಕಾರಕ್ಕೆ ಬಂದ ಶ್ರೀಮತಿ ಗಾಂಧಿಯವರ ಆಡಳಿತದ ವೈಖರಿಯನ್ನು ಅನೇಕ ಉದಾಹರಣೆಗಳಿಂದ ನಿರೂಪಿಸಿದರು. ಮಾರ್ಮಿಕವಾಗಿ, ಮೊರಾದಾಬಾದ್ ಘಟನೆಗಳನ್ನು ಪ್ರಸ್ತಾಪಿಸುತ್ತಾ ಕಾಂ. ಪಿ ಆರ್. ದೆಹಲಿಯಲ್ಲೇ ಬೀದಿ ಬೀದಿಯಲ್ಲಿ ನಡೆಯುತ್ತಿರುವ ಕೊಲೆ-ಸುಲಿಗೆಗಳ ಬಗ್ಗೆ ತಿಳಿಸಿದರು. ಸಿ ಐ.ಟಿ ಯು. ಪ್ರಾರಂಭಿಸಬೇಕಾದ ಹಿನ್ನೆಲೆಯನ್ನು, ಸಿ.ಐ ಟಿ. ಯು. ಸ್ಥಾಪಿಸಿದ ನಂತರ ಅನುಭವಿಸಿದ ಅಪಾರ ಕಷ್ಟನಷ್ಟಗಳನ್ನು ಪರವಶರಾಗಿ ವಿವರಿಸಿದ ಕಾಂ. ಪಿ. ಆರ್, ಮುಂದುವರಿದು, ಪ್ರತಿಗಾಮಿಗಳೊಂದಿಗೆ, ಪರಿಷ್ಕರಣವಾದಿಗಳೊಂದಿಗೆ ನಿರಂತರ ಹೋರಾಟ ನಡೆಸಿದ್ದನ್ನು ಪ್ರಸ್ತಾಪಿಸಿದರು. ಈ ಒಂದು ದಶಕದಲ್ಲಿ ಬಂಡವಾಳಶಾಹಿಯ ಯಾವುದೇ ಸವಾಲನ್ನೆದುರಿಸಲು ಸಿ.ಐ.ಟಿ.ಯು. ಸನ್ನದ್ಧವಾಗಿದೆ ಎಂದು ಕಾಂ ಪಿ. ಆರ್. ಗರ್ಜಿಸಿದರು. ಕೋಮುವಾದಿ, ಸರ್ವಾಧಿಕಾರಿ ಶಕ್ತಿಗಳ ಬೆಳವಣಿಗೆಗೆ ಆತಂಕ ವ್ಯಕ್ತಪಡಿಸಿದರು.

ಇನ್ನೂ ಗ್ರೌಂಡನಲ್ಲಿ ಜನಸಮೂಹ ಬರುತ್ತಲೇ ಇತ್ತು. ಸಹಸ್ರಾರು ಜನ ವಿದ್ದರೂ ಕೇವಲ ಕೈಬೆರಳುಗಳ ಮೇಲೆ ಎಣಿಸುವಷ್ಟು ಮಾತ್ರ ಪೋಲೀಸರಿದ್ದರು. ಸಮಯ 7 ಘಂಟೆಯಾದಾಗ ನಮ್ಮ ಬಸ್ಸಿಗೆ ಸಮಯವಾದ್ದರಿಂದ ಒಲ್ಲದಮನಸ್ಸಿನಿಂದ ಸ್ಥಳಬಿಟ್ಟೆವು. ಕಾಂ. ಪಿ. ಆರ್. ಇನ್ನೂ ಮಾತನಾಡುತ್ತಲೇ ಇದ್ದರು.

ಕಣ್ಣಾನೂರು ಬಿಟ್ಟು ಬೆಂಗಳೂರು ತಲುಪಿದಾಗ ಸಮಯ ಬೆಳಗಿನ 6ಘಂಟೆ. ಶರೀರ ಬಳಲಿದ್ದರೂ ಮನಸ್ಸು ವಿಶಿಷ್ಟ ಅನುಭವದಿಂದ ಸಂತಸದಿಂದಿತ್ತು.

-ವಿ. ಪಿ. ಕುಲಕರ್ಣಿ

●

ಸ್ಟೈಪೆಂಡರಿ ಪದವೀದರರ ಗುಲಾಮಗಿರಿ

ರಾಜ್ಯದ ಸ್ಟೈಪೆಂಡರಿ ಯೋಜನೆಯ ಅನ್ವಯ ರಾಜ್ಯಾದ್ಯಂತ ಸುಮಾರು 15000 ಪದವೀಧರರು ಕೆಲಸಮಾಡುತ್ತಲಿರುವರು. ಇವರಿಗೆ ಕೊಡುವ ಸಂಬಳ ತಿಂಗಳಿಗೆ 150ರೂಗಳು.

ಜೀವನಾವಶ್ಯಕ ಬೆಲೆಗಳು ಗಗನಕ್ಕೇರಿರುವ ಈ ಸಂದರ್ಭದಲ್ಲಿ 150 ರೂಗಳಿಗೆ 8 ಘಂಟೆಗಳಿಗಿಂತ ಹೆಚ್ಚು ದುಡಿಸಿಕೊಳ್ಳುತ್ತಿರುವ ಸರಕಾರದ ನೀತಿ ಹೇಯವಾದದ್ದು. ತಮ್ಮ ಮೇಲಧಿಕಾರಿಗಳಿಗೆ ತೃಪ್ತಿಕರವಾಗುವಂತೆ ಕೆಲಸ ನಿರ್ವಹಿಸದಿದ್ದರೆ ಯಾವುದೇ ಮುನ್ನೆಚ್ಚರಿಕೆ ಇಲ್ಲದೇ ಕೆಲಸದಿಂದ ತೆಗೆಯುವ ಹೆದರಿಕೆ ಬೇರೆ. ಅರೆ ಹೊಟ್ಟೆ ತುಂಬಿಸಲು ಬೇರೆ ಕಡೆ ಕೆಲಸ ಮಾಡಕೂಡದೆಂಬ ನಿರ್ಬಂಧ ಬೇರೆ.

ಜನತೆಯ ಹಿತರಕ್ಷಿಸಬೇಕಾಗಿರುವ ಸರಕಾರವೇ ಖುದ್ದು ಈ ಬಡಪಾಯಿಗಳನ್ನು ಶೋಷಿಸುತ್ತಿದೆ. ಈ ಯುವಜನರು ತಮ್ಮ ಮೇಲಾಗುತ್ತಿರುವ ದೌರ್ಜನ್ಯವನ್ನು ಪ್ರತಿಭಟಿಸಿ, ಹೆಚ್ಚಿನ ಸಂಬಳ (ತಿಂಗಳಿಗೆ 300 ರೂ) ದ ಬೇಡಿಕೆ ಮುಂದಿಸಿ ಅನೇಕ ಸಲ ಹೋರಾಟಗಳನ್ನು ಮಾಡಿದ್ದಾರೆ. ಉಪವಾಸ ಸತ್ಯಾಗ್ರಹ ಮಾಡಿದ್ದಾರೆ. ಮನವಿಗಳನ್ನು ಅರ್ಪಿಸಿದ್ದಾರೆ. ಮಂತ್ರಿಮಹಾಶಯರುಗಳಿಂದ ಆಶ್ವಾಸನೆಗಳೇನೋ ಧಾರಾಳವಾಗಿ ಸಿಕ್ಕಿದ್ದರೂ ಪರಿಣಾಮ ಮಾತ್ರ ಸೊನ್ನೆ.

ತಮ್ಮ ಮೇಲಾಗುತ್ತಿರುವ ಅನ್ಯಾಯದ ವಿರುದ್ಧ, ಸರಕಾರದ ಅಮಾನವೀಯತೆಯ ವಿರುದ್ಧ ಹೋರಾಡುತ್ತಿರುವ ಈ ಯುವಕರಿಗೆ ರಾಜ್ಯದ ರೈತ ಕಾರ್ಮಿಕರು, ಬುದ್ಧಿಜೀವಿಗಳು ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಸಹಕರಿಸಬೇಕಾದುದು ಅತ್ಯಾವಶ್ಯ.

○

ಆರು ಪಕ್ಷಗಳ ಒಕ್ಕೂಟದ ಮೇಲಿನ ಟೀಕೆಗಳಿಗೆ ಉತ್ತರ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವೂ ಸೇರಿದಂತೆ, ಆರುಪಕ್ಷಗಳು ಒಂದೆಡೆ ಸೇರಿರುವುದು ಟೈಮ್ಸ್ ಆಫ್ ಇಂಡಿಯಾದ ಸಂಪಾದಕರನ್ನು ಸಿಟ್ಟಿಗೆಬ್ಬಿಸಿದೆ. ಆಗಸ್ಟ್ 30ರ ಪತ್ರಿಕೆಯಲ್ಲಿ ಅವರು ಹೀಗೆ ಬರೆಯುತ್ತಾರೆ:

"ಜನಪ್ರಿಯ ಚಳುವಳಿಗಳನ್ನು ನಿರ್ದೇಶಿಸುವ ವಿಶೇಷ ಉದ್ದೇಶಕ್ಕಾಗಿ ಸಮನ್ವಯ ಸಮಿತಿಯನ್ನು ರಚಿಸಿರುವುದು ವಿವಾದಾಸ್ಪದವಾಗಿದೆ. ರಾಷ್ಟ್ರದ ಜೀವನದ ಕಷ್ಟದ ಸಮಯದಲ್ಲಿ ದೇಶವನ್ನು ಆಳುವ ಸರ್ಕಾರದ ಕೆಲಸವನ್ನು ಈ ವಿರೋಧ ಪಕ್ಷಗಳು ಇನ್ನಷ್ಟು ಕಷ್ಟಗೊಳಿಸುವವೇ ಹೇಗೆ?"

ಸರ್ಕಾರದಲ್ಲಿ ಅನೇಕ ದೌರ್ಬಲ್ಯಗಳು ಮತ್ತು ಕೊರತೆಗಳು ಇವೆಯೆಂದು ಸಂಪಾದಕೀಯ ಒಪ್ಪಿಕೊಳ್ಳುತ್ತದೆ. ಹಾಗಿದ್ದೂ ಅದು ಮುಂದುವರಿದು ಹೀಗೆ ಹೇಳುತ್ತದೆ: "ಆದರೆ, ವರ್ತನೆಗಳ ಬಗ್ಗೆ ಹೆಚ್ಚು ಕಾಳಜಿಯಿಂದ ಇನ್ನೂ ಉತ್ತಮವಾದ ಮಂತ್ರಿಮಂಡಲವಿದ್ದಿದ್ದರೆ, ಬೆಲೆಗಳ ಏರಿಕೆ, ಉತ್ತರ ಪ್ರದೇಶದ ಇತ್ತೀಚಿನ ದಂಗೆಗಳು ಅಥವಾ ಉತ್ತರ ಪ್ರದೇಶದ ಕೆಲವು ಪೋಲೀಸರ ದುರಾಕ್ರಮಣಗಳನ್ನು ತಡೆದಿರುತ್ತಿತ್ತೆಂದು ಹೇಳುವುದು ಕ್ಷುದ್ರತನವಾಗುತ್ತದೆ. ದೇಶವು ಈಗ ಕಷ್ಟಕರ ಹಂತದಲ್ಲಿದೆ ಮತ್ತು ಅದು ಎದುರಿಸುತ್ತಿರುವ ಸಮಸ್ಯೆಗಳು ಮುಂಬರುವ ವರ್ಷಗಳಲ್ಲಿ ಇನ್ನಷ್ಟು ಬಿಗಿಯಾಗುತ್ತವೆಯೇ ಹೊರತು ಕಡಿಮೆಯಾಗುವುದಿಲ್ಲ". ಕೊನೆಗೆ, "ಅವು ದಂಗೆಗಳು ಅಥವಾ ಸಣ್ಣ ವಿಧಾವದ ಪ್ರಯತ್ನಗಳಿಗೆ ಮಣಿಯುವುದಿಲ್ಲ" ಎಂಬ ತೀರ್ಮಾನ ಹೇಳಲಾಗಿದೆ.

ಜನಪ್ರಿಯ ಚಳುವಳಿಗಳನ್ನು ಬೆಳೆಸುವುದು ಎಂದರೆ, ಈ ವಿದ್ವಾಂಸರಾದ ಸಂಪಾದಕರ ಪ್ರಕಾರ, ಸರ್ಕಾರದಲ್ಲಿ ಬದಲಾವಣೆಯನ್ನು ತರಲು ಪ್ರಯತ್ನಿಸುವುದು; ಈ ಆರು ಪಕ್ಷಗಳು ಉದ್ದೇಶಿಸಿರುವ ಚಳುವಳಿಯು ಸರ್ಕಾರದ ಸಿಬ್ಬಂದಿಯಲ್ಲಿ ಬದಲಾವಣೆ ತರಲೆತ್ನಿಸಿದೆ. ಆದರೆ ಇದು ಸತ್ಯಕ್ಕೆ ವಿರೋಧಿ ಎಂಬುದನ್ನು ಅವರಿಗೆ ತಿಳಿಸುತ್ತೇವೆ.

ನಮ್ಮ ದೇಶದಲ್ಲಿ ಈಗಿರುವ ರೀತಿಯ ಸಂಸದೀಯ ಪ್ರಜಾಪ್ರಭುತ್ವವು ಯಾವುದೇ ಚುನಾವಣೆಯಲ್ಲಿ ಯಾವ ಪಕ್ಷವು ಬಹುಮತಗಳಿಸುತ್ತದೆಯೋ ಅದು ದೇಶದ ಹಣೆಬರಹವನ್ನು ಐದು ವರ್ಷಗಳವರೆಗೆ ನಿರ್ಧರಿಸುವ ಹಕ್ಕನ್ನು ಕೊಡುತ್ತದೆ. ಇದು ಕೇಂದ್ರದಲ್ಲಿರುವ ಕಾಂಗ್ರೆಸ್ (ಐ) ಗೆ ಎಷ್ಟು ನಿಜವೋ ಇತರ ರಾಜ್ಯಗಳ ಪಕ್ಷಗಳ ವಿಚಾರಕ್ಕೂ ಅಷ್ಟೇ ನಿಜ. ಎಲ್ಲಾ ಪಕ್ಷಗಳಲ್ಲಿ ಯಾವುವೂ ಒಟ್ಟಾಗಿಯೋ ಅಥವಾ ಬೇರೆಯಾಗಿಯೋ ಸಂಸದೀಯ ಪ್ರಜಾಪ್ರಭುತ್ವದ ಈ ಸಾಮಾನ್ಯ ನಿಯಮದ ವಿರುದ್ಧವಾಗಿ ಆಲೋಚಿಸುವುದಿಲ್ಲ.

ಹೀಗೆಂದ ಮಾತ್ರಕ್ಕೆ ಆಯ್ಕೆಯಾದ ಸರ್ಕಾರದ ಐದು ವರ್ಷಗಳ ಅವಧಿಯಲ್ಲಿ, ಅದು ತನ್ನ ಮನಸ್ಸಿಗೆ ಬಂದ ಹಾಗೆ ಮಿಲಿಯಗಟ್ಟಲೆ ಜನತೆಯ ಜೀವಗಳ ಜೊತೆ ಆಟವಾಡುವುದಕ್ಕೆ ವಿರೋಧ ಪಕ್ಷಗಳು ಬಿಟ್ಟುಬಿಡಬೇಕು ಎಂದು ಅರ್ಥವಲ್ಲ. ಯಾವ ಸಂಸದೀಯ ಪ್ರಜಾಪ್ರಭುತ್ವದ ನಿಯಮಗಳು ಆಳುವ ಪಕ್ಷಕ್ಕೆ ಆಳುವ ಹಕ್ಕನ್ನು ಕೊಡುತ್ತದೆಯೋ ಅವೇ ನಿಯಮಗಳು ವಿರೋಧ ಪಕ್ಷಗಳಿಗೂ ಸರ್ಕಾರವನ್ನು ಟೀಕಿಸುವ, ಅದರ ತಪ್ಪು ನೀತಿಗಳನ್ನು ಬಯಲಿಗೆಳೆಯುವ ಮತ್ತು ಅದನ್ನು ಬದಲಾಯಿಸಬೇಕೆಂದು ಒತ್ತಾಯಿಸುವ ಹಕ್ಕನ್ನೂ ಕೊಟ್ಟಿರುತ್ತವೆ.

ಆರು ಪಕ್ಷಗಳು ಆಲೋಚಿಸಿರುವ ಹಾಗೆ, ದೈನಂದಿನ ಜ್ವಲಂತ ಸಮಸ್ಯೆಗಳ ಬಗ್ಗೆ ಜನತೆಯ ಚಳುವಳಿಗಳನ್ನು ರೂಪಿಸುವುದು ಎಂದರೆ, ಆಳುವ ಪಕ್ಷದ ಮತ್ತು ಸರ್ಕಾರದ ತಪ್ಪು ನೀತಿಗಳನ್ನು ಸಾಮೂಹಿಕವಾಗಿ ಬಯಲಿಗಿಡುವುದು, ಇತರ ಸರಿಯಾದ ನೀತಿಗಳನ್ನು ಅನುಸರಿಸುವಂತೆ ಒತ್ತಾಯಿಸುವುದು ಮತ್ತು ಈ ಸರಿಯಾದ ನೀತಿಗಳ ಪರವಾಗಿ ಜನತೆಯನ್ನು ಸಂಘಟಿಸುವುದು. ವಿರೋಧ ಪಕ್ಷಗಳ ಈ ನ್ಯಾಯಬದ್ಧ ಚಟುವಟಿಕೆಯ ಬಗ್ಗೆ ಯಾರೇಕೆ ಆಕ್ಷೇಪಣೆ ಎತ್ತಬೇಕು. "ಇಂಡಿಯಾ ಅಂದರೆ ಇಂದಿರಾ, ಇಂದಿರಾ ಅಂದರೆ ಇಂಡಿಯಾ" ಅನ್ನುವ ಹಳೆ, ಕುಖ್ಯಾತ ಘೋಷಣೆಯನ್ನು ಪುನರಾವರ್ತಿಸದಿದ್ದರೆ ಹಾಗೆನ್ನಬೇಕಿಲ್ಲ, ಕಾಂಗ್ರೆಸ್ (ಐ)ನ ಎಲ್ಲವನ್ನೂ ಬಲ್ಲ ನಾಯಕತ್ವದಲ್ಲಿ ದೇಶದ ಎಲ್ಲ ಜನರೂ ಮೂಕ ಪಶುಗಳಂತೆ ಜೀವಿಸಬೇಕು ಎಂದು ಹೇಳುವವರ ವರ್ಗಕ್ಕೆ ಟೈಮ್ಸ್ ಆಫ್ ಇಂಡಿಯಾದ ಸಂಪಾದಕರೂ ಸೇರಿದ್ದಾರೆಯೇ ಎಂಬ ಗುಮಾನಿ ಬರುತ್ತದೆ.

ಈ ವರ್ಗದಲ್ಲಿ ಟೈಮ್ಸ್ ಆಫ್ ಇಂಡಿಯಾ ಒಂದೇ ಅಲ್ಲ ಇರುವುದು. ದೆಹಲಿಯಿಂದ ಬರುವ ಇನ್ನೊಂದು ದಿನಪತ್ರಿಕೆ ನ್ಯಾಷನಲ್ ಹೆರಾಲ್ಡ್ ಕೂಡ ಇದೇ ತರದ ಭಾವನೆಗಳನ್ನು ಸೂಚಿಸಿದೆ. ಈ ಪತ್ರಿಕೆಯ ಸೆಪ್ಟೆಂಬರ್ ಒಂದರ ಸಂಪಾದಕೀಯದಲ್ಲಿ ಈ ರೀತಿ ಇದೆ:

"ದೆಹಲಿಯಲ್ಲಿ ಕಳೆದವಾರ ಸಭೆ ಸೇರಿ ಸಮನ್ವಯ ಸಮಿತಿ ರಚಿಸಿರುವ ಆರು ವಿರೋಧ ಪಕ್ಷಗಳು ದೇಶದ ಸದ್ಯದ ಸಾಮಾಜಿಕ-ಆರ್ಥಿಕ ವಾಸ್ತವಗಳ ಬಗ್ಗೆ ಕಣ್ಣುಮುಚ್ಚಿ, ರಾಷ್ಟ್ರ ವಿರೋಧಿ ಶಕ್ತಿಗಳು ಮತ್ತು ವಿದೇಶಿ ಅಂಶಗಳು ಸೃಷ್ಟಿಸಿರುವ ಪರಿಸ್ಥಿತಿಯ ಲಾಭ ಪಡೆದುಕೊಳ್ಳಲು ನಿರ್ಧರಿಸಿವೆ."

ಯಾರು ಹೊಣೆ :

ಈ ಪರಿಸ್ಥಿತಿಯನ್ನು ಮೂಲಭೂತವಾಗಿ 'ಸೃಷ್ಟಿಸಿರುವುದು' ದೇಶದ ಆಳುವವರ್ಗಗಳೇ ಎಂದು ವಿರೋಧ ಪಕ್ಷಗಳು ನಂಬಿವೆ ಎಂಬುದನ್ನು ನ್ಯಾಷನಲ್ ಹೆರಾಲ್ಡ್ ಈ ಮಾನ್ಯ ಸಂಪಾದಕರಿಗೆ ಮೊದಲು ಹೇಳೋಣ. "ರಾಷ್ಟ್ರ ವಿರೋಧಿ ಶಕ್ತಿಗಳು ಮತ್ತು ವಿದೇಶಿ ಅಂಶಗಳು"- ಸರಿಯಾಗಿ ಹೇಳುವುದಾದರೆ "ಆಂತರಿಕ ಪ್ರತಿಗಾಮಿಗಳು ಮತ್ತು ವಿದೇಶಿ ಸಾಮ್ರಾಜ್ಯಶಾಹಿಗಳು ಆಳುವ ಪಕ್ಷದ ಈ ಜನವಿರೋಧಿ ನೀತಿಗಳಿಂದ ಉಂಟಾದ ಪರಿಸ್ಥಿತಿಯ ದುರ್ಲಾಭವನ್ನು ಪಡೆದುಕೊಂಡಿವೆಯಷ್ಟೆ.

ಆಳುವ ಪಕ್ಷ ಅನುಸರಿಸುತ್ತಿರುವ ನೀತಿಗಳ ವಿರುದ್ಧವಾಗಿ ಮತ್ತು ದೇಶದ ಹಿತಾಸಕ್ತಿಗಳ ಸಲುವಾಗಿ ಸರಿಯಾದ ನೀತಿಗಳನ್ನು ಪಾಲಿಸಬೇಕೆಂದು ಒತ್ತಾಯಿಸಿ, ಎಡ ಚಳುವಳಿಯವರಾದ ನಾವು ನಿರಂತರವಾಗಿ ಹೋರಾಡುತ್ತಿದ್ದೇವೆಂಬುದನ್ನು ಈ ಇಬ್ಬರು ಮಾನ್ಯ ಸಂಪಾದಕರಿಗೆ ನಾವು ನೆನಪಿಸೋಣವೆ? ಆರು ಪಕ್ಷಗಳು ರೂಪಿಸಲೆತ್ನಿಸಿರುವ ಜನಪ್ರಿಯ ಚಳುವಳಿಗಳನ್ನು ಖಂಡಿಸುವುದರ ಮೂಲಕ ಈ ಇಬ್ಬರು ಸಂಪಾದಕರು, ಆಳುವ ಪಕ್ಷದ ಜನವಿರೋಧಿ ನೀತಿಗಳು ಜನತೆಗೆ ಅತಿಬಿಕ್ಕಟ್ಟಿನ ಪರಿಸ್ಥಿತಿಯನ್ನು ಸೃಷ್ಟಿಸಿದ್ದಾಗಲೂ ಸಹ, ಅದಕ್ಕೆ ಮೂಲಭೂತವಾಗಿ ವಿರುದ್ಧವಾದ ಅಭಿಪ್ರಾಯಗಳನ್ನು ಹೊಂದಿರುವ ಪಕ್ಷಗಳು ಮತ್ತು ಸಂಘಟನೆಗಳು ಮಾತನಾಡದೆ ಸುಮ್ಮನಿರಬೇಕೆಂದು ಸೂಚಿಸುತ್ತಿದ್ದಾರೆ.

ಉದಾಹರಣೆಗೆ ಆಥಿಕತೆಯ ಸ್ಥಿತಿ ಮತ್ತು ಬೆಲೆಗಳ ವಿಚಾರವನ್ನೇ ತೆಗೆದುಕೊಳ್ಳಿ. ಇದೂ ಕೂಡ "ರಾಷ್ಟ್ರ ವಿರೋಧಿಶಕ್ತಿಗಳು ಮತ್ತು ವಿದೇಶಿ

ಇ. ಎಂ. ಎಸ್. ನಂಬೂದಿರಿಪಾದ್

ಅಂಶಗಳ" ಕೆಲಸವೇ ಎಂದು ಈ ಮಾನ್ಯ ಸಂಪಾದಕರು ನಮ್ಮೆಲ್ಲರನ್ನು ನಂಬಿಸಿಯಾರು. ಹಣದುಬ್ಬರ, ವಿಪರೀತ ಬೆಲೆಗಳು, ಸ್ಥಗಿತತೆ, ನಿರುದ್ಯೋಗ ಇವೆಲ್ಲವೂ ಜಗತ್ತಿನಲ್ಲೆಲ್ಲಾ ಇರುವ ವಿಷಯಗಳೇ, ಅದರ ಬಗ್ಗೆ ಈ ದೇಶದ ಸರ್ಕಾರವು ಏನನ್ನೂ ಮಾಡಲು ಸಾಧ್ಯವಿಲ್ಲ ಎಂದು ಇವರು ಹೇಳುತ್ತಾರೆ.

ಇದೊಂದು ಪಾಪವೆ ?

ಸರ್ಕಾರವು ಅನುಸರಿಸುತ್ತಿರುವ ನೀತಿಗಳಿಂದ ಇಂಥದೇ ಪರಿಸ್ಥಿತಿ ಬಂದೊದಗುತ್ತದೆ ಎಂದು ದೇಶದ ವಾಮಪಕ್ಷಗಳು ನಿರಂತರವಾಗಿ ಸರ್ಕಾರ ಮತ್ತು ಜನತೆಗೆ ಎಚ್ಚರಿಕೆ ಕೊಟ್ಟೇ ಇವೆ ಎಂಬುದನ್ನು ಇವರಿಬ್ಬರಿಗೆ ನೆನಪಿಸಬೇಕು. ಬೆಲೆ ಏರಿಕೆಯ ಬಗ್ಗೆ ಹೇಳುವುದಾದರೆ, ಈ ಸಮಸ್ಯೆಗೆ ಮೂಲಭೂತ ಪರಿಹಾರ ಸಿಗಬೇಕಾದರೆ ಸರ್ಕಾರದ ಮೂಲಭೂತ ನೀತಿಗಳು ಬದಲಾಗಬೇಕು. ಅದಲ್ಲದೆ ಅಲ್ಪಾವಧಿ ಪರಿಹಾರಗಳನ್ನು ಕೂಡ ಕಂಡುಕೊಳ್ಳಬಹುದು ಎಂಬುದನ್ನು ನಾವು ಸೂಚಿಸಿದ್ದೇವೆ. ಸುಮಾರು ಒಂದು ಡಜನ್ ಅತಿ ಅಗತ್ಯದ ಬಳಕೆ ವಸ್ತುಗಳನ್ನು ಸರ್ಕಾರ ತನ್ನ ನಿಯಂತ್ರಣಕ್ಕೆ ತಂದುಕೊಂಡು ದೇಶದಾದ್ಯಂತ ಹರಡಿರುವ ಸಾರ್ವಜನಿಕ ವಿತರಣಾ ಏಜೆನ್ಸಿಗಳ ಮೂಲಕ ವಿತರಿಸಲು ವ್ಯವಸ್ಥೆ ಮಾಡಬೇಕು.

ಇಂಥ ಸಾರ್ವಜನಿಕ ವಿತರಣಾ ಏಜೆನ್ಸಿಗಳನ್ನು ಸ್ಥಾಪಿಸಿ ನಡೆಸಬೇಕಾದರೆ, ಸರ್ಕಾರವು ಈ ವಸ್ತುಗಳ ಸಗಟು ವ್ಯಾಪಾರವನ್ನು ತಾನೇ ತೆಗೆದುಕೊಂಡು ಭಾರಿ ಪ್ರಮಾಣದಲಿ ಸಂಗ್ರಹಣೆ ನಡೆಸಬೇಕು. ರೈತರಿಗೆ ಪ್ರೋತ್ಸಾಹಕರ ಬೆಲೆಗಳನ್ನು ನೀಡಬೇಕು. ಸರ್ಕಾರವು ಬೆಲೆ ಏರಿಕೆ ಪ್ರಶ್ನೆಯನ್ನು ಬಗೆಹರಿಸುವುದಕ್ಕೆ ಇಂಥ ಕ್ರಮವನ್ನು ಅನುಸರಿಸಬೇಕು ಎಂಬ ಬೇಡಿಕೆಯ ಬಗ್ಗೆ ವಿರೋಧ ಪಕ್ಷಗಳು ಜನತೆಯನ್ನು ಸಂಘಟಿಸುವುದೇ ಒಂದು "ಪಾಪ"ವೆ ?

ಆದರೆ ಇದನ್ನು ಒಂದು ನಿಯಮವಾಗಿ ಸರ್ಕಾರವೇ ಒಪ್ಪಿಕೊಂಡಿರುವುದು ಒಂದು ತೃಪ್ತಿಯ ವಿಚಾರವಾಗಿದೆ. ಇತ್ತೀಚೆಗೆ ರಾಷ್ಟ್ರೀಯ ಅಭಿವೃದ್ಧಿ ಮಂಡಲಿಗೆ ಸಲ್ಲಿಸಿ, ಅದು ಒಟ್ಟಾರೆ ಒಪ್ಪಿಕೊಂಡಿರುವ ಆರನೇ ಪಂಚವಾರ್ಷಿಕ ಯೋಜನೆಯ ಕರಡಿನಲ್ಲಿ "ಬಡರೈತರ ದುಃಸ್ಥಿತಿಯ ಮಾರಾಟಗಳನ್ನು ತಪ್ಪಿಸಲು ಸಾರ್ವಜನಿಕ ವಿತರಣಾ ವ್ಯವಸ್ಥೆಗೆ ಸಂಬಂಧಿಸಿದಂತೆ ಗ್ರಾಮೀಣ ಗೋದಾಮು ಮತ್ತು ತಾಂತ್ರಿಕ ಕೇಂದ್ರಗಳನ್ನು ಸ್ಥಾಪಿಸುವ ಸಲಹೆ ಮಾಡಲಾಗಿದೆ.

ಕಹಿ ಅನುಭವ :

ಆದರೆ ಇದನ್ನು ನಿಯಮವಾಗಿ ಒಪ್ಪಿಕೊಂಡ ಮಾತ್ರಕ್ಕೆ ಸಮಸ್ಯೆ ಪರಿಹಾರವಾಗುವುದಿಲ್ಲ. ಏಕೆಂದರೆ, ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯ ತಮ್ಮ ಭಾಷಣದಲ್ಲಿ ಪ್ರಧಾನಿಯೇ ಹೇಳಿದ ಹಾಗೆ, ಪಟ್ಟಭದ್ರ ಹಿತಾಸಕ್ತಿಗಳು ಇಂಥ "ರಾಚನಿಕ ಸುಧಾರಣೆ"ಗಳ ವಿರುದ್ಧ ಹೋರಾಡುತ್ತವೆ. ಈ ಇಬ್ಬರ ಸಂಪಾದಕರನ್ನು ಕೆರಳಿಸಿರುವ ಜನಪ್ರಿಯ ಚಳುವಳಿಯು, ಅಂಥ ಹಿತಾಸಕ್ತಿಗಳ ವಿರುದ್ಧ ಜನತೆಯನ್ನು ಸಂಘಟಿಸುವ ಉದ್ದೇಶ ಹೊಂದಿದೆ.

ಆಳುವ ಪಕ್ಷ ಮತ್ತು ಈ ಸಂಪಾದಕರಂಥ ಅದರ ಬೆಂಬಲಿಗರು ತಿಳಿದುಕೊಂಡಿರುವ ಹಾಗೆ, ಆ "ರಾಚನಿಕ ಸುಧಾರಣೆ" (structural reforms) ಗಳನ್ನು ತರುವುದನ್ನು ಜನತೆಯು ಸರ್ಕಾರವೊಂದಕ್ಕೇ ಬಿಟ್ಟುಬಿಟ್ಟರೆ ಸಾಧ್ಯ ಎಂದು ಎಡ ಚಳುವಳಿಯ ನಾವು ತಿಳಿದುಕೊಂಡಿಲ್ಲ. ಅಲ್ಲದೆ ಅಂಥ ಘೋಷಣೆಗಳನ್ನು ಆಡುವ ನಾಯಕರನ್ನುಳ್ಳ ಆಳುವ ಪಕ್ಷವು ಮಾತಿನಲ್ಲಿ ಅಂಥದನ್ನು ಹೇಳಿ ಕಾರ್ಯದಲ್ಲಿ ಪಟ್ಟಭದ್ರ ಹಿತಾಸಕ್ತಿಗಳಿಗೇ ಸಹಾಯ ಮಾಡುತ್ತಿರುವುದನ್ನು ನಾವು ನಮ್ಮ ಕಹಿ ಅನುಭವದಿಂದ ತಿಳಿದುಕೊಂಡಿದ್ದೇವೆ.

ಅದಷ್ಟೇ ಅಲ್ಲದೆ, ಸಾರ್ವಜನಿಕ ವಿತರಣಾ ಏಜೆನ್ಸಿಗಳ ವ್ಯವಸ್ಥೆ ಸ್ಥಾಪಿಸುವುದು, ರೈತರಿಗೆ ಮತ್ತು ಸಣ್ಣ ಪ್ರಮಾಣದ ಉತ್ಪಾದಕರಿಗೆ ಪ್ರೋತ್ಸಾಹಕರ ಬೆಲೆ ನಿಗದಿ ಪಡಿಸುವುದು ಮುಂತಾದನ್ನು ಮಾಡುವುದಕ್ಕೆ, ಸರ್ಕಾರದ ಕೈಗಾರಿಕಾ, ಕೃಷಿ, ಸಾಲ, ತೆರಿಗೆ ಇವುಗಳ ನೀತಿಯಲ್ಲಿ ಅಪಾರ ಬದಲಾವಣೆಗಳನ್ನು ಮಾಡಬೇಕಾಗುತ್ತದೆ. ಆರು ವಿರೋಧ ಪಕ್ಷಗಳು ಉದ್ದೇಶಿಸಿರುವ ಜನಪ್ರಿಯ ಚಳುವಳಿಯು, ಸರ್ಕಾರ ಘೋಷಿಸಿರುವ ಕೆಲವು ಸರಿಯಾದ ನೀತಿಗಳ ಜಾರಿಗಷ್ಟೇ ಅಲ್ಲದೆ, ಜನತೆಯ ಸಮಸ್ಯೆಗಳ ಪರಿಹಾರಕ್ಕೆ ಅಗತ್ಯವಾದ ಇತರ ನೀತಿಗಳನ್ನೂ ಜಾರಿ ಮಾಡಿರೆಂದು ಒತ್ತಾಯಿಸಲು ಜನತೆಯನ್ನು ಸಂಘಟಿಸುತ್ತದೆ.

ಕೋಮು ಗಲಭೆಗಳು :

ಮತ್ತೆ ಕೋಮು ಗಲಭೆಯ ಪ್ರಶ್ನೆ ಮತ್ತು ಅದನ್ನು ಪರಿಹರಿಸಲು ತರಲುದ್ದೇಶಿಸಿರುವ ಗಲಭೆ ಪೀಡಿತ ಪ್ರದೇಶ ಶಾಸನದಂಥ ಕ್ರಮಗಳನ್ನು ತೆಗೆದುಕೊಳ್ಳೋಣ. ಇಲ್ಲಿ ಕೂಡ ಎಲ್ಲವನ್ನೂ ಆಡಳಿತಕ್ಕೇ ಬಿಟ್ಟುಬಿಡುವುದು, ದೇಶದ ಪ್ರತಿಯೊಬ್ಬ ಶಾಂತಿಪ್ರಿಯ ಪ್ರಜೆಗೂ ಕೆಡುಕೆನ್ನಿಸುತ್ತದೆ. ಹಳೆ ಗಲಭೆಗಳ ಬಗ್ಗೆ ಮಾತನಾಡದೆ, ಇತ್ತೀಚಿನ ಮೊರಾದಾಬಾದ್ ಮತ್ತಿತರ ಉತ್ತರ ಪ್ರದೇಶದ ಗಲಭೆಗಳ ಕಹಿ ಅನುಭವದಿಂದ ನಾವು ಅರಿತಿರುವುದೇನೆಂದರೆ, ಆಡಳಿತದ ಕೆಲವು ಭಾಗಗಳೂ ಕೂಡ (ಉ. ಪ್ರದೇಶದಲ್ಲಿ ಪಿ.ಎ.ಸಿ. ನಂಥವು) ಅಲ್ಪಸಂಖ್ಯಾತರ ಮೇಲಿನ ಆಕ್ರಮಣಕಾರಿ ಶಕ್ತಿಗಳಿಗೆ ಸಾಧನಗಳಾಗಿವೆ ಎನ್ನುವುದು.

ಎಲ್ಲಿ ಆಡಳಿತ ಯಂತ್ರವು ಅಲ್ಪಸಂಖ್ಯಾತರ ವಿರುದ್ಧ ಅಷ್ಟೊಂದು ದಮನಕಾರಿಯಾಗಿಲ್ಲವೋ ಅಂಥ ಕಡೆ ಕೂಡ, ಕೋಮುಗಳ ನಡುವೆ ಸೌಹಾರ್ದ, ಶಾಂತಿಗಳಿಗಾಗಿ ಸಾಮಾನ್ಯ ಜನರನ್ನು ಸಂಘಟಿಸದೆ ಇದ್ದರೆ, ಕೋಮು ಪ್ರತಿಕ್ರಿಯೆಯ ವಿರುದ್ಧ ಹೋರಾಡುವುದಕ್ಕೆ ಆಗುವುದಿಲ್ಲ. ಸ್ಥಾನ ಬದ್ಧತಾಕಾಯಿದೆ ಮುಂತಾದ ದಮನಕಾರಿ ಶಾಸನಗಳನ್ನು ನಾವು ಏಕೆ ವಿರೋಧಿಸು

[6ನೇ ಪುಟ ನೋಡಿ]

ಉದ್ಯೋಗ ಇಲ್ಲವೆ ನಿರುದ್ಯೋಗ ಭತ್ತೆಗಾಗಿ ಹೋರಾಡಲು

ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ಕರೆ

ಸ್ವಾತಂತ್ರ್ಯಾನಂತರ ಕೇಂದ್ರದಲ್ಲಿ ಅಧಿಕಾರ ನಡೆಸಿಕೊಂಡು ಬಂದ ಭೂಮಾಲೀಕ-ಬಂಡವಾಳಶಾಹಿ ಪಕ್ಷಗಳು ಅನುಸರಿಸುತ್ತಾ ಬಂದಿರುವ ತಪ್ಪು ಧೋರಣೆಗಳಿಂದಲಾಗಿ ಮತ್ತು ಭಾರತ ದೇಶವನ್ನು ಬಂಡವಾಳಶಾಹಿ ಪಥದಲ್ಲಿ ಕೊಂಡೊಯ್ಯುತ್ತ ಬಂದುದರ ಪರಿಣಾಮವಾಗಿ ನಿರುದ್ಯೋಗ ಸಮಸ್ಯೆಯು ಬೃಹದಾಕಾರವಾಗಿ ಬೆಳೆದಿದೆ. ಬಂಡವಾಳಶಾಹಿ ಉದ್ಯಮಗಳು ಎದುರಿಸುತ್ತಲಿರುವ ಬಿಕ್ಕಟ್ಟು ಮತ್ತು ಸ್ವಯಂಚಾಲಿತ ಯಂತ್ರಗಳ ಉಪಕರಣಗಳಿಂದ ಒಂದೆಡೆ ಉದ್ಯೋಗದಲ್ಲಿರುವವರು ಉದ್ಯೋಗ ಕಳೆದುಕೊಂಡರೆ, ಇನ್ನೊಂದೆಡೆ ಗ್ರಾಮೀಣ ಪ್ರದೇಶದಲ್ಲಿ ಹಳ್ಳಿಯ ಬಡವರು ದಿವಾಳಿಯಾಗಿ ಉದ್ಯೋಗಾವಕಾಶ ಇಲ್ಲದೆ ನಿರುದ್ಯೋಗಿಗಳ ಸಂಖ್ಯೆ ದಿನೇ ದಿನೇ ಏರುತ್ತಿದೆ. ಕೃಷಿ ರಂಗದಲ್ಲಿ ತೀವ್ರ ಸುಧಾರಣೆ, ರಾಷ್ಟ್ರದ ಸರ್ವತೋಮುಖ ಔದ್ಯಮೀಕರಣಗಳಿಲ್ಲದೆ ನಿರುದ್ಯೋಗ ಸಮಸ್ಯೆ ಬಗೆಹರಿಸುವುದು ಅಸಾಧ್ಯ. ಆದರೆ ನಮ್ಮನ್ನಾಳುವ ಸರಕಾರ ಈ ಬಗ್ಗೆ ಗಮನ ಕೊಡದೆ ಕೇವಲ ಕೆಲವೇ ಬಂಡವಾಳಶಾಹೀ-ಭೂಮಾಲಕರ ಹಿತವನ್ನು ರಕ್ಷಿಸುತ್ತಲಿದೆ. ಇದು ಎಷ್ಟರ ಮಟ್ಟಿಗೆ ಎಂದರೆ ನಮ್ಮ ಪ್ರಾಕೃತಿಕ ಮತ್ತು ಖನಿಜ ಸಂಪತ್ತನ್ನು ಹೊರದೇಶದ ಬಂಡವಾಳಗಾರರು ದೋಚಿಕೊಂಡು ಹೋಗುವಂತಾಗಿದೆ.

ಸರಕಾರದ ನಿರುದ್ಯೋಗ ನಿವಾರಣಾ ಕಾರ್ಯಕ್ರಮಗಳೆಲ್ಲಾ ಕೇವಲ ಘೋಷಣೆಗಳಾಗಿಯೇ ಉಳಿದಿವೆ. ಉದ್ಯೋಗ ವಿನಿಮಯ ಕಛೇರಿಗಳೆಂದರೆ ನಿರುದ್ಯೋಗಿಗಳನ್ನು ಕುಣಿಸುವುದಕ್ಕೆ ಮಾತ್ರ. ಈ ಕಛೇರಿಗಳಲ್ಲಿ ತುಂಬಿರುವ ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತದಿಂದಲಾಗಿ, ನ್ಯಾಯ ದೊರೆಯುವುದು ಅಸಾಧ್ಯವಾಗಿದೆ. ಆದರೆ ಇದೇ ಸಂದರ್ಭದಲ್ಲಿ ಪಶ್ಚಿಮ ಬಂಗಾಲ ಮತ್ತು ತ್ರಿಪುರಾದ ಎಡರಂಗ ಸರಕಾರಗಳೂ, ಕೇರಳದ ಎಡ ಪ್ರಜಾಪ್ರಭುತ್ವ ಸರಕಾರವೂ ತಮಗೆ ಇರುವ ಸೀಮಿತ ಹಕ್ಕುಗಳ ಚೌಕಟ್ಟಿನೊಳಗೆ ಹೆಚ್ಚಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸುವುದು ಮತ್ತು ಉದ್ಯೋಗ ದೊರೆಯುವ ತನಕ ಸಹಾಯವಾಗಲು ನಿರುದ್ಯೋಗಿಗಳಿಗೆ ನಿರುದ್ಯೋಗ ಭತ್ತೆ ಕೊಡುವುದನ್ನು ಪ್ರಾರಂಭಿಸಿರುವುದು ಶ್ಲಾಘನೀಯ. ಇದೀಗ, ತಮಿಳುನಾಡಿನಲ್ಲಿನ ಸರಕಾರವೂ ಇದೇ ಯೋಜನೆಯನ್ನು ಹಾಕುತ್ತಿದೆ. ಈ ಸಂದರ್ಭದಲ್ಲಿ ನಿರುದ್ಯೋಗ ಮತ್ತು ಭ್ರಷ್ಟಾಚಾರಗಳ ವಿರುದ್ಧ ಹೋರಾಡುವುದು ಎಲ್ಲಾ ಯುವಜನತೆಯ ಕರ್ತವ್ಯವಾಗಿದೆ.

●

"ಉದ್ಯೋಗ ಕೊಡಿ ಇಲ್ಲವೆ ನಿರುದ್ಯೋಗ ಭತ್ತೆ ಕೊಡಿ; ಉದ್ಯೋಗ ವಿನಿಮಯ ಕಛೇರಿಗಳಲ್ಲಿ ನಡೆಯುವ ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತ ನಿಲ್ಲಲಿ; ಹೊರದೇಶಗಳಿಗೆ ನಮ್ಮ ಖನಿಜ ಮತ್ತು ಪ್ರಾಕೃತಿಕ ಸಂಪತ್ತನ್ನು ಕೊಂಡೊಯ್ಯುವುದನ್ನು ನಿಲ್ಲಿಸಿ ಇಲ್ಲಿಯೇ ಉದ್ಯಮಗಳನ್ನು ಸ್ಥಾಪಿಸಿ ಉದ್ಯೋಗ ಕೊಡಿ..." ಎಂಬ ಬೇಡಿಕೆಗಳನ್ನು ಮುಂದಿರಿಸಿ, ಇದೇ ಅಕ್ಟೋಬರ್ 6 ರಂದು (6-10-80) ಬೇಡಿಕೆ ದಿನ ಆಚರಿಸಲು 14-9-80 ರಂದು ಬೆಂಗಳೂರಿನಲ್ಲಿ ಸೇರಿದ್ದ ಕರ್ನಾಟಕ ರಾಜ್ಯ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ರಾಜ್ಯ ಸಮಿತಿ ಸಭೆಯು ಕರೆ ಇತ್ತಿದೆ. ಅಕ್ಟೋಬರ್ 6 ರಂದು ಉದ್ಯೋಗ ವಿನಿಮಯ ಕಛೇರಿಗಳಿರುವ ಕಡೆಗಳಲ್ಲಿ ಈ ಕಛೇರಿಗಳ ಮುಂದೂ, ಇನ್ನುಳಿದ ಕಡೆಗಳಲ್ಲಿ ಸ್ಥಳೀಯ ಮುಖ್ಯ ರೆವಿನ್ಯೂ ಅಧಿಕಾರಿಯ ಕಛೇರಿ ಮುಂದೂ, ಧರಣಿ ಸತ್ಯಾಗ್ರಹ, ಮನವಿ ಅರ್ಪಿಸುವುದು, ಮೆರವಣಿಗೆ ಮತ್ತು ಸಭೆ ನಡೆಸುವುದು- ಇವೇ ಮೊದಲಾದ ಕಾರ್ಯಕ್ರಮ ಹಾಕಲು ರಾಜ್ಯದಲ್ಲಿರುವ ತನ್ನ ಎಲ್ಲಾ ಘಟಕಗಳಿಗೆ ರಾಜ್ಯ ಸಮಿತಿಯು ಕರೆ ಇತ್ತಿದೆ. ಈ ಕಾರ್ಯಕ್ರಮದ ಮೊದಲು ಕರಪತ್ರ ಹಂಚುವುದು, ಭಿತ್ತಿ ಪತ್ರ ಹಾಕುವುದು - ಇವೇ ಮೊದಲಾದ ಕಾರ್ಯಕ್ರಮಗಳ ಮೂಲಕ ಜನತೆಗೆ ತಿಳುವಳಿಕೆ ನೀಡಬೇಕೆಂದೂ ರಾಜ್ಯ ಸಮಿತಿ ಕರೆ ಇತ್ತಿದೆ. ಅಕ್ಟೋಬರ್ 6 ರಂದಿನ ಕಾರ್ಯಕ್ರಮವು ಕೊನೆಯಲ್ಲವೆಂದೂ, ಇದು ಹೋರಾಟದ ಪ್ರಾರಂಭವೆಂದೂ, ಹಂತಹಂತವಾಗಿ ಹೋರಾಟವನ್ನು ಮುನ್ನಡೆಸಲಾಗುವುದೆಂದೂ ರಾಜ್ಯ ಸಮಿತಿಯು ಹೇಳಿದೆ.

ರಾಜ್ಯದಲ್ಲಿ ಸ್ಟೈಫಂಡರೀ ಪದವೀಧರರು ಅತ್ಯಂತ ಕಷ್ಟದಲ್ಲಿದ್ದು, ಅವರ ಬಗ್ಗೆ ಸರಕಾರವು ಸುಮ್ಮಗೆ ಇರುವುದನ್ನು ತೀವ್ರವಾಗಿ ಖಂಡಿಸಿದ ರಾಜ್ಯ ಸಮಿತಿಯು, ಸ್ಟೈಫಂಡರೀ ಪದವೀಧರರ ಹೋರಾಟಕ್ಕೆ ತನ್ನ ಸಂಪೂರ್ಣ ಬೆಂಬಲವನ್ನಿತ್ತಿದೆ. ಇವರಿಗೆ ಕೆಲಸವನ್ನು ಖಾಯಂಗೊಳಿಸಬೇಕೆಂದೂ, ತಕ್ಷಣ ವೇತನ ಹೆಚ್ಚಿಸಬೇಕೆಂದೂ ಸರಕಾರವನ್ನು ಯುವಜನ ಸಂಘಟನೆ ಒತ್ತಾಯಿಸಿದೆ.

ಕಾಂ. ಇಕ್‌ಬಾಲ್ ಹುಸ್ಸೇನರ ಅಧ್ಯಕ್ಷತೆಯಲ್ಲಿ ಸೇರಿದ್ದ ರಾಜ್ಯ ಸಮಿತಿಯ ಸಭೆಯಲ್ಲಿ ರಾಜ್ಯ ಸಮಿತಿಯ ಮುಖ್ಯ ಸಂಚಾಲಕ ಕಾಂ ಜಿ ವಿ. ಶ್ರೀರಾಮರೆಡ್ಡಿಯವರು ಇತ್ತ ವರದಿಯ ಬಗ್ಗೆ ಮತ್ತು ಇತರ ಸದಸ್ಯರುಗಳು ಕೊಟ್ಟ ಪ್ರದೇಶವಾರು ವರದಿ ಬಗ್ಗೆ ಚರ್ಚೆಯು ನಡೆದು ಅನೇಕ ಸಂಘಟನಾ ತೀರ್ಮಾನಗಳನ್ನು ಕೈಗೊಳ್ಳಲಾಯಿತು. ರಾಜ್ಯದಾದ್ಯಂತ ಸ್ಥಳೀಯ ಸಮಸ್ಯೆಗಳ ಬಗ್ಗೆ ಹೋರಾಟವನ್ನು ಬೆಳೆಸುವುದರೊಂದಿಗೇ ಸದಸ್ಯತ್ವವನ್ನು ದೊಡ್ಡ ಸಂಖ್ಯೆಯಲ್ಲಿ ಸೇರಿಸಲು ರಾಜ್ಯಸಮಿತಿಯು ತನ್ನೆಲ್ಲಾ ಘಟಕಗಳಿಗೆ ಕರೆ ಇತ್ತಿದೆ.

ಅಕ್ಟೋಬರ್ ಕೊನೆಯ ವಾರದ ಪಂಜಾಬಿನಲ್ಲಿ ರಾಷ್ಟ್ರೀಯ ಮಟ್ಟದ ಸಮ್ಮೇಳನ ನಡೆಯಲಿದ್ದು, ಇದರ ಬಗ್ಗೆ ಕರ್ನಾಟಕ ರಾಜ್ಯದಲ್ಲಿ ಸಾಕಷ್ಟು ಪ್ರಚಾರ ನಡೆಸಲು ಮತ್ತು ರಾಷ್ಟ್ರೀಯ ಸಮ್ಮೇಳನಕ್ಕೆ ಒಂದು ಸಾವಿರ ಸದಸ್ಯರಿಗೆ ಒಬ್ಬರಂತೆ ಪ್ರತಿನಿಧಿಗಳನ್ನು ಕಳುಹಿಸುವುದೆಂದೂ ನಿರ್ಣಯಿಸಲಾಯಿತು. ಮುಂದಿನ ವರ್ಷದ ಮೊದಲ ಭಾಗದಲ್ಲಿ ರಾಜ್ಯಮಟ್ಟದ ಸಮ್ಮೇಳನ ನಡೆಯಲಿದ್ದು, ಸಂಘಟನೆ ಮತ್ತು ಹೋರಾಟವನ್ನು ಬಲಿಷ್ಠವಾಗಿ ಬೆಳೆಸಲು ಮುಂದಾಗಬೇಕೆಂದು ರಾಜ್ಯಸಮಿತಿಯು ತನ್ನೆಲ್ಲಾ ಘಟಕಗಳಿಗೆ ಕರೆ ಇತ್ತಿದೆ.

●

ಪೊಲಿಟ್‌ಬ್ಯೂರೊ ಪ್ರತಿಭಟನೆ

ಇದು ರಾಜ್ಯಗಳ ಸ್ವಾಯತ್ತೆಯ ಮೇಲೆ ಹಲ್ಲೆ

ಕೆಲವು ಪ್ರದೇಶಗಳನ್ನು ಗಲಭೆ ಪೀಡಿತ ಪ್ರದೇಶಗಳೆಂದು ಘೋಷಿಸಲು ಮತ್ತು ರಾಜ್ಯ ಸರ್ಕಾರಗಳ ಸಲಹೆ ಇಲ್ಲದೆ ಅಂಥ ಪ್ರದೇಶಗಳ ಪರಿಸ್ಥಿತಿಯನ್ನು ನಿರ್ವಹಿಸಲು ವಿಶೇಷ ಅಧಿಕಾರಗಳನ್ನು ಪ್ರಯೋಗಿಸಲು, ಕೇಂದ್ರ ಸರ್ಕಾರವು ತನ್ನ ಕೈಗೆ ಅಧಿಕಾರ ತೆಗೆದುಕೊಳ್ಳುವಂಥ ಕ್ರಮಗಳನ್ನು ಯೋಜಿಸಿರುವುದರ ಬಗ್ಗೆ ಭಾರತ ಕಮ್ಯುನಿಸ್ಟ್ ಪಕ್ಷದ (ಮಾರ್ಕ್ಸ್‌ವಾದಿ) ಪೊಲಿಟ್‌ಬ್ಯೂರೊ ತನ್ನ ಉಗ್ರ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತದೆ. ಕಾಂಗ್ರೆ ಆಡಳಿತದಲ್ಲಿರುವ ಕೆಲವು ರಾಜ್ಯಗಳು ಈಗಾಗಲೇ ಅಂಥ ಅಧಿಕಾರಗಳನ್ನು ಪಡೆದುಕೊಂಡಿವೆ.

ನಾಗರಿಕ ಅಧಿಕಾರಿಗಳು ಅರೆ ಮಿಲಿಟರಿ ಮತ್ತು ಸಾಯುಧ ಪಡೆಗಳ ಸಹಾಯ ಪಡೆಯುವಷ್ಟರ ಮಟ್ಟಿಗೆ ದೇಶದ ಅನೇಕ ಪ್ರದೇಶಗಳಲ್ಲಿ ಕೋಮು ಕಲಹಗಳು ನಡೆದಿವೆ ಎಂಬ ಆಧಾರದ ಮೇಲೆ ಈ ಕ್ರಮ ಕೈಗೊಳ್ಳಲಾಗುತ್ತಿದೆ.

ಆದರೆ ಇದುವರೆಗೆ ಅಂಥ ಶಾಸನಗಳ ಅನುಭವದ ಮೇಲೆ ಹೇಳುವುದಾದರೆ, ಈ ವಿಶೇಷ ಅಧಿಕಾರಗಳನ್ನು ಯಾವಾಗಲೂ, ತಮ್ಮ ನೋವುಗಳ ನಿವಾರಣೆಗೆ ಸಾಮಾನ್ಯ ಜನತೆ ನಡೆಸುವ ನ್ಯಾಯಬದ್ಧ ಚಳುವಳಿಗಳನ್ನು ದಮನಮಾಡಲು ಉಪಯೋಗಿಸಲಾಗಿದೆ. ಈ "ಗಲಭೆಗಳು" ಎಂಬ ಪಟ್ಟಿಯಲ್ಲಿ, ಗುಜರಾತ್, ಕರ್ನಾಟಕ ಮುಂತಾದ ಕಡೆ ನಡೆಯುತ್ತಿರುವ ಹಾಗೆ, ಬೆಲೆ ಏರಿಕೆ ಮುಂತಾದ್ದರ ಬಗ್ಗೆ ಸಾಮಾನ್ಯ ಜನತೆ ನಡೆಸುವ ನ್ಯಾಯಬದ್ಧ ಚಳುವಳಿಗಳೂ ಸೇರಿವೆ ಎಂಬುದನ್ನೂ ಗಮನಿಸಬೇಕು.

ಇತ್ತೀಚೆಗೆ ದೇಶದ ಅನೇಕ ಕಡೆ ಆದಹಾಗೆ, ಗಲಭೆಗಳನ್ನು ನಡೆಸುವಂತೆ ಅಲ್ಪಸಂಖ್ಯಾತರ ವಿರುದ್ಧ ಬಹುಸಂಖ್ಯಾತರನ್ನು ಪ್ರೇರೇಪಿಸುವಂಥ ಹೇಯ ಶಕ್ತಿಗಳ ವಿರುದ್ಧ ಹೋರಾಡುವ ಅಗತ್ಯವನ್ನು ಗುರುತಿಸುವುದರಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಯಾರಿಗಿಂತಲೂ ಹಿಂದೆ ಬೀಳುವುದಿಲ್ಲ. ಆದರೆ ಪ್ರಜಾಸತ್ತಾತ್ಮಕ ಪಕ್ಷಗಳು, ಸಂಘಟನೆಗಳು, ಗುಂಪುಗಳು ಮತ್ತು ವ್ಯಕ್ತಿಗಳ ಪೂರ್ಣ ಮತ್ತು ಸ್ವಪ್ರೇರಿತ ಸಹಕಾರವಿಲ್ಲದಿದ್ದರೆ ಈ ಶಕ್ತಿಗಳ ವಿರುದ್ಧ ಹೋರಾಡಲು ಸಾಧ್ಯವಿಲ್ಲ. ಆದರೆ ಇಂಥ ಪ್ರಜಾಸತ್ತಾತ್ಮಕ ಶಕ್ತಿಗಳ ವಿರುದ್ಧವೇ ಈ ಶಾಸನವನ್ನು ಉಪಯೋಗಿಸಲಾಗುತ್ತದೆ.

ದೇಶದ ಯಾವ ರಾಜ್ಯಗಳಲ್ಲಿ ಈ ಗಲಭೆಗಳು ಉಂಟಾದವೋ ಅದರಲ್ಲಿ ಬಹು ರಾಜ್ಯಗಳು ಕಾಂಗ್ರೆನ ಆಡಳಿತದಲ್ಲಿವೆ ಎಂಬುದನ್ನು ಸೂಚಿಸಲು ಪೊಲಿಟ್‌ಬ್ಯೂರೊ ಬಯಸುತ್ತದೆ. ಕಾಂಗ್ರೆ ಆಡಳಿತವಿಲ್ಲದ ರಾಜ್ಯಗಳ ಸರಕಾರಗಳು, ತಾವು ಇಂಥ ಗಲಭೆಗಳನ್ನು ಹತ್ತಿಕ್ಕಲು ಸಾಧ್ಯವಿರುವ ಪ್ರತಿಯೊಂದು ಕ್ರಮವನ್ನೂ ಕೈಗೊಳ್ಳುವುದಾಗಿ ಹೇಳಿವೆ. ಆದರೆ ತಮ್ಮ ಕಾನೂನು ಮತ್ತು ಶಿಸ್ತಿನ ಪರಿಸ್ಥಿತಿಯನ್ನು ನಿರ್ವಹಿಸುವ ಅಧಿಕಾರವನ್ನು ರಾಜ್ಯಸರ್ಕಾರಗಳಿಂದ (ಕಾಂಗ್ರೆ ಮತ್ತು ಇತರ) ಕಿತ್ತುಕೊಳ್ಳಬಯಸುವ ಕೇಂದ್ರ ಸರ್ಕಾರದ ಈ ಕ್ರಮ ರಾಜ್ಯಗಳ ಸ್ವಾಯತ್ತೆಯ ಮೇಲಿನ ಹಲ್ಲೆಯಾಗಿದೆ.

ಕೇಂದ್ರ ಸರ್ಕಾರದ ಈ ಕ್ರಮವನ್ನು ಜಾರಿಗೊಳಿಸಲು ಅವಕಾಶ ಮಾಡಿಕೊಟ್ಟರೆ, ಇದು ಪ್ರಜಾಪ್ರಭುತ್ವವಾದಿ ವ್ಯವಸ್ಥೆಯ ಮೇಲಿನ ಹಲ್ಲೆಯ ಆರಂಭವಾಗಲಿದೆ ಎಂಬುದನ್ನು ಪ್ರಜಾಸತ್ತಾತ್ಮಕ ಚಳುವಳಿಯ ಪ್ರತಿಯೊಂದು ಅಂಗವೂ ಅರ್ಥಮಾಡಿಕೊಳ್ಳುತ್ತದೆ ಎಂದು ಪೊಲಿಟ್‌ಬ್ಯೂರೊ ಆಶಿಸುತ್ತದೆ. ಆದ್ದರಿಂದ ಕೋಮು ಗಲಭೆಗಳನ್ನು ಪ್ರೇರೇಪಿಸುವ ಹೇಯ ಶಕ್ತಿಗಳ ವಿರುದ್ಧ ಹೋರಾಡುತ್ತಲೇ, ಈ ಕ್ರಮದ ವಿರುದ್ಧ ದನಿಯೆತ್ತಲು ಎಲ್ಲರೂ ಒಂದಾಗಬೇಕೆಂದು ಪೊಲಿಟ್‌ಬ್ಯೂರೋವು ವಿನಂತಿಸುತ್ತದೆ.

●

ಗೂಂಡಾಗಿರಿಯ ಖಂಡನೆ

ಕೋಲಾರ ಸರಕಾರಿ ಕಾಲೇಜಿನಲ್ಲಿ ಎಸ್. ಎಫ್. ಐ. ಕಾರ್ಯಕರ್ತರ ಮೇಲೆ ಅಲ್ಲಿಯ ಕ್ರಿಯಾ ಸಮಿತಿಯ ಪುಂಡರು ನಡೆಸಿದ ಹಲ್ಲೆಯನ್ನು ಕೋಲಾರ ಜಿಲ್ಲಾ ಎಸ್. ಎಫ್. ಐ. ಮತ್ತು ಪ್ರಜಾಸತ್ತಾತ್ಮಕ ಯುವಜನ ಸಂಘಟನೆಗಳ ಸಂಚಾಲಕರಾದ ಕಾಂ. ಸಿ. ವಿ. ಮುನಿನಾರಾಯಣಸ್ವಾಮಿಯವರು ಖಂಡಿಸಿದ್ದಾರೆ. ಸ್ಥಳಕ್ಕೆ ಭೇಟಿ ಇತ್ತ ಇವರು ಎಸ್. ಎಫ್. ಐ. ಬೆಳವಣಿಗೆಯನ್ನು ಸಹಿಸದೆ, ಈ ರೀತಿ ಹಲ್ಲೆ ಮಾಡುವುದರ ಮೂಲಕ ಮತ್ತು ಹಳ್ಳಿಯ ಹಾಗೂ ನಗರದ ವಿದ್ಯಾರ್ಥಿಗಳೆಂದು ಒಡಕು ತರುವುದರ ಮೂಲಕ ಎಸ್. ಎಫ್. ಐ.ಯನ್ನು ನಾಶಗೈಯ್ಯಲು ಮಾಡುವ ಯತ್ನವನ್ನು ವಿಫಲಗೊಳಿಸಲು ವಿದ್ಯಾರ್ಥಿ-ಯುವಜನತೆಗೆ ಕರೆ ಇತ್ತಿರುವರು.

○

ಮಂಗಳೂರು ಬೀಡಿ ಕಾರ್ಮಿಕರು ಹೋರಾಟದ ಪಥದಲ್ಲಿ

ತಾ. 10-9-80ನೇ ಬುಧವಾರ ಸಂಜೆ ಘಂಟೆ 6ಕ್ಕೆ ಬೋಳಾರ ಹಂಚಿನ ಮಜೂರರ ಸಂಘದ ಆಫೀಸಿನಲ್ಲಿ ಮಂಗಳೂರು ನಗರದ 7ನೇ ಮತ್ತು 8ನೇ ಡಿವಿಜನಿನ ಬೀಡಿ ಕಾರ್ಯಕರ್ತರ ಸಭೆಯು ಜರಗಿತು.

ಕಾಂ. ಲೋಕಯ್ಯ ಶೆಟ್ಟಿಯವರು ಸಭೆಯನ್ನು ಕರೆದ ಉದ್ದೇಶವನ್ನು ವಿವರಿಸುತ್ತಾ ಬೀಡಿ ಮಜೂರರಿಂದ ಪ್ರಾವಿಡೆಂಟ್ ಫಂಡಿಗೆ ಕೂಲಿಯಲ್ಲಿ ಕಡಿತ ಮಾಡಿದ್ದರೂ ಈ ವರೆಗೆ ಅದಕ್ಕೆ ಯಾವುದೇ ದಾಖಲೆಯನ್ನು ಮಜೂರರಿಗೆ ಕೊಡದಿರುವುದನ್ನು ಸಭೆಯ ಗಮನಕ್ಕೆ ತಂದರು. ದ. ಕ. ಜಿಲ್ಲಾ ಫೆಡರೇಶನ್ ಈ ಬಗ್ಗೆ ತಾ. 22-9-80ರಂದು ಮಜೂರರಿಂದ ಸಹಿ ಸಂಗ್ರಹ ಮಾಡಿರುವ ಮನವಿಯನ್ನು ಪ್ರಾವಿಡೆಂಟ್ ಫಂಡ್ ಕಮೀಷನರಿಗೆ ಕಳುಹಿಸುವ ಕಾರ್ಯಕ್ರಮ, ಹಾಗೆಯೇ ಬೀಡಿ ಕಂಟ್ರಾಕ್ಟುದಾರರಿಗೂ ನಮ್ಮಿಂದ ಕಡಿತವಾದ ಪ್ರಾವಿಡೆಂಟ್ ಫಂಡಿನ ಮೊತ್ತದ ದಾಖಲೆ ಕೊಡಬೇಕೆಂದು ಮನವಿ ಕೊಡುವುದು ಮತ್ತು ತಾ. 29-9-80 ರಂದು ಕೂಲಿ ಹೆಚ್ಚಳ, ಪ್ರಾವಿಡೆಂಟ್ ಫಂಡ್ ದಾಖಲೆ ಪತ್ರ, ವಾರದಲ್ಲಿ 6 ದಿನ ಕೆಲಸ ಮೊದಲಾದ ಬೇಡಿಕೆಯನ್ನು ಮುಂದಿಟ್ಟು ದ. ಕ. ಜಿಲ್ಲಾಧಿಕಾರಿಯವರಿಗೆ ಮನವಿ ಕೊಟ್ಟು ಅಲ್ಲಿಂದ ಸಹಸ್ರ ಸಂಖ್ಯೆಯಲ್ಲಿ ಬೀಡಿ ಮಜೂರರು ಬೀಡಿ ಮಾಲೀಕರ ಕಚೇರಿಯ ಮುಂದೆ ಪ್ರದರ್ಶನ ಮಾಡುವ ತೀರ್ಮಾನವನ್ನು ಯಶಸ್ವಿಗೊಳಿಸಬೇಕೆಂದು ಹೇಳಿದರು.

ಕಾಂ. ರಾಮಣ್ಣ ಶೆಟ್ಟಿ, ಕಾಂ. ಎಚ್. ಗೋಪಾಲ ಮತ್ತು ಮಂಗಳೂರು ಬೀಡಿ ಕೆಲಸಗಾರರ ಸಂಘದ ಕಾರ್ಯದರ್ಶಿ ಕಾಂ. ಜೆ ವೀರಪ್ಪರವರು ಸಂಘಟನೆಯ ಮಹತ್ವ ಮತ್ತು ಮುಂದಿರುವ ಕರ್ತವ್ಯಗಳ ಬಗ್ಗೆ ವಿವರಿಸಿದರು.

ಕಾಂ. ಲೋಕಯ್ಯ ಶೆಟ್ಟಿ, ಕಾರ್ಯದರ್ಶಿ, ಕಾಂ. ರಾಮಣ್ಣ ಶೆಟ್ಟಿ ಮತ್ತು ಕಾಂ. ಬಾಲಕೃಷ್ಣ ಶೆಟ್ಟಿ ಜೊತೆ ಕಾರ್ಯದರ್ಶಿಗಳಿರುವ 25 ಮಂದಿಯ ಪ್ರಾದೇಶಿಕ ಕಮಿಟಿಯನ್ನು ರಚಿಸಲಾಯಿತು.

ಕಾಂ. ಕಮಲಾಕ್ಷ ಬಂಗೇರರು ಸಭೆಗೆ ಧನ್ಯವಾದವಿತ್ತು ಸಭೆಯು ಮುಕ್ತಾಯವಾಯಿತು.

●

ರೈತರ ಬೇಡಿಕೆಗಳಿಗೆ ಸರ್ಕಾರಿ ನೌಕರರ ಬೆಂಬಲ

ಕರ್ನಾಟಕ ರಾಜ್ಯದ ರೈತ ಬಂಧುಗಳ ಬೆಳೆಯ ಉತ್ಪನ್ನಗಳಿಗೆ ನ್ಯಾಯವಾದ ಬೆಲೆಯನ್ನು ಸರ್ಕಾರವು ನಿರ್ದಿಷ್ಟಪಡಿಸದೆ, ರೈತರ ಅವಶ್ಯಕತೆಗಳಾದ ಗೊಬ್ಬರ, ಬೀಜ ಮತ್ತು ಸಸ್ಯ ಸಂರಕ್ಷಣಾ ಔಷಧಿಗಳೂ ಮತ್ತು ವ್ಯವಸಾಯೋಪಕರಣಗಳ ಬೆಲೆ ಗಗನಕ್ಕೇರಿದ್ದು, ರೈತರು ಕಷ್ಟ ಕಾರ್ಪಣ್ಯಗಳಿಗೆ, ಸಾಲ ಸೋಲಗಳಿಗೆ ಸಿಕ್ಕಿರುವುದನ್ನು ರಾಜ್ಯ ಸರ್ಕಾರಿ ನೌಕರರ ಸಂಘವು ಗಮನಿಸಿ ಅವರ ಇತ್ತೀಚಿನ ಬೇಡಿಕೆಗಳನ್ನು ಬೆಂಬಲಿಸುವುದೇ ಅಲ್ಲದೆ, ಸರ್ಕಾರವು ಅವರ ನ್ಯಾಯಯುತವಾದ ಬೇಡಿಕೆಗಳನ್ನು ತಕ್ಷಣ ಮನ್ನಿಸಿ ಸೂಕ್ತ ಪರಿಹಾರವನ್ನು ಒದಗಿಸಿಕೊಡಬೇಕೆಂದು 10-9-80 ರಂದು ತುಮಕೂರಿನಲ್ಲಿ ಸೇರಿದ್ದ ಸರಕಾರಿ ನೌಕರರ ಮಹಾಸಭೆಯು ಒತ್ತಾಯಿಸಿದೆ.

○

ಗ್ರಂಥಾಲಯ ಸ್ಥಳಾಂತರಕ್ಕೆ ವಿರೋಧ

ಕೋಲಾರ ಜಿಲ್ಲಾ ಚಿಂತಾಮಣಿಯಲ್ಲಿ 2-9-80ರಂದು ಎಲ್ಲಾ ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ, ಜಿಲ್ಲಾ ಕೇಂದ್ರ ಗ್ರಂಥಾಲಯವನ್ನು ಚಿಂತಾಮಣಿಯಿಂದ ಕೋಲಾರಕ್ಕೆ ವರ್ಗಾಯಿಸದಂತೆ ಪ್ರತಿಭಟನೆ ನಡೆಸಿದರು. ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಿ, ವೃತ್ತದಲ್ಲಿ ಬಹಿರಂಗ ಸಭೆ ನಡೆಸಿದ ವಿದ್ಯಾರ್ಥಿಗಳು ತಹಸೀಲ್ದಾರರವರಿಗೆ ಮನವಿ ಇತ್ತರು. ಗ್ರಂಥಾಲಯವನ್ನು ಸ್ಥಳಾಂತರಿಸಿದ್ದೇ ಆದರೆ ತೀವ್ರ ಚಳುವಳಿ ನಡೆಸಲು ವಿದ್ಯಾರ್ಥಿಗಳು ನಿರ್ಧರಿಸಿರುವರು.

○

ನಿಧನ

ಮಂಗಳೂರಿನ ಜಪ್ಪಿನಮೊಗರು ಗ್ರಾಮ ತಂದೋಳಿಗೆಯಲ್ಲಿ ವಾಸವಾಗಿರುವ ಕಾಂ. ಮಂಜಪ್ಪ ಕೋಟ್ಯಾರಿಯವರು ತಾ. 1-9-1980 ರಂದು ಅಸ್ವಸ್ಥದಿಂದ ನಿಧನರಾದರು. ಶ್ರೀಯುತರಿಗೆ 85 ವರ್ಷವಾಗಿತ್ತು. ಶ್ರೀಯುತರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಭಿಮಾನಿಯಾಗಿದ್ದರು. ಇವರಿಗೆ ಜಪ್ಪಿನಮೊಗ್ರು ಪಾರ್ಟಿ ಶಾಖೆಯು ತನ್ನ ಸಂತಾಪ ಸೂಚಿಸಿದೆ.

●

ಆರು ಪಕ್ಷಗಳ ಒಕ್ಕೂಟದ ಮೇಲಿನ ಟೀಕೆಗಳಿಗೆ ಉತ್ತರ

(4ನೇ ಪುಟದಿಂದ)

ತ್ತೇವೆಂದರೆ, ಯಾರು ಕೋಮು ಪ್ರತಿಕ್ರಿಯೆಯ ವಿರುದ್ಧ ಹೋರಾಡುತ್ತಾರೋ, ಯಾರು "ರಾಜಕೀಯ ಸುಧಾರಣೆ"ಗಳನ್ನು ವಿರೋಧಿಸುವ ಪಟ್ಟಭದ್ರ ಶಕ್ತಿಗಳ ವಿರುದ್ಧ ಹೋರಾಡುತ್ತಾರೋ ಅಂಥವರ ಮೇಲೇ ಇದನ್ನು ಪ್ರಯೋಗಿಸಲಾಗುತ್ತದೆ.

ಎರಡು ದೃಷ್ಟಿಕೋನಗಳು :

ಆದ್ದರಿಂದ ಇಲ್ಲಿ ಎರಡು ದೃಷ್ಟಿಕೋನಗಳಿವೆ; ಒಂದು ಆ ಇಬ್ಬರು ಸಂಪಾದಕರದು, ಇನ್ನೊಂದು, ಆರು ವಿರೋಧ ಪಕ್ಷಗಳದ್ದು. ಮೊದಲನೆಯದು; ಜನತೆ ಎಲ್ಲವನ್ನೂ ಆಡಳಿತದ "ಪ್ರತಿಭೆ" ಮತ್ತು "ಸಾಮರ್ಥ್ಯ"ಕ್ಕೆ ಬಿಟ್ಟುಬಿಡಬೇಕೆಂದು ಹೇಳಿ ಎಲ್ಲ ಜನಸಂಘಟನೆಯನ್ನು ಖಂಡಿಸುತ್ತದೆ. ಸರ್ಕಾರಿ ನೀತಿಯ ಬಗ್ಗೆ ಬರುವ ಅಸಮಾಧಾನದ ಪ್ರತಿಯೊಂದು ಮಾತನ್ನು "ರಾಷ್ಟ್ರವಿರೋಧಿ" ಎಂದು ಖಂಡಿಸುತ್ತದೆ. ಎರಡನೆಯದು, ಕೋಮು ಪ್ರತಿಕ್ರಿಯೆ-ಸಾಮಾಜಿಕ-ಆರ್ಥಿಕ ಜೀವನ ಇವುಗಳಲ್ಲಿ ಪ್ರತಿಗಾಮಿ ಶಕ್ತಿಗಳನ್ನು ಬೇರ್ಪಡಿಸಲು ಹೊಸ ನೀತಿಗಳನ್ನು ತರಬೇಕೆಂದು ಹೋರಾಡಲು ಮತ್ತು ಸಂಘಟಿತರಾಗಲು ಜನತೆಗೆ ಕರೆ ಕೊಡುತ್ತದೆ.

ಇವರಂತೆಯೇ ಆರು ಪಕ್ಷಗಳ ವಿರೋಧಿ ರಂಗದ ಬಗ್ಗೆ ಕೆರಳಿರುವವರು ಜನತಾ ಪಕ್ಷದ ಅಧ್ಯಕ್ಷ ಚಂದ್ರಶೇಖರ್. ಭಾರತೀಯ ಜನತಾ ಪಕ್ಷ ಇಲ್ಲದಿದ್ದ ಮೇಲೆ ಇದು ವಿರೋಧಿ ರಂಗವೇ ಅಲ್ಲ ಎಂದು ಅವರು ಹೇಳಿದ್ದಾರೆ. ಅಲ್ಲದೆ "ಜನತಾ ಸರ್ಕಾರವನ್ನು ಮುರಿದು ಶ್ರೀಮತಿ ಇಂದಿರಾಗಾಂಧಿಯವರನ್ನು ಮತ್ತೆ ಅಧಿಕಾರಕ್ಕೆ ತಂದುದಕ್ಕಾಗಿ" ಅವರು ಈ ಆರು ವಿರೋಧ ಪಕ್ಷಗಳನ್ನು ದೂಷಿಸಿದ್ದಾರೆ.

ಚಂದ್ರಶೇಖರ್ ಮತ್ತು ಅವರ ಸಹೋದ್ಯೋಗಿಗಳೇ, ತಮ್ಮ ಇತರ ಸಹೋದ್ಯೋಗಿಗಳ ಒತ್ತಡಕ್ಕೆ ಮಣಿದು ಆರೆಸ್ಸೆಸ್ ಜೊತೆ ಸಂಬಂಧ ಕಡಿದುಕೊಂಡಿದ್ದು, ಈ ಆರೆಸ್ಸೆಸ್ ನಾಯಕರೇ ಮುಂದೆ ಭಾರತೀಯ ಜನತಾ ಪಕ್ಷ ರಚಿಸಿಕೊಂಡರು. ಆದರೆ, ಅಂಥ ಪಕ್ಷದ ನಾಯಕರೊಬ್ಬರು ಯಾವ ಪಕ್ಷಗಳ ರಂಗ ರಚಿಸಿಕೊಳ್ಳಬೇಕಾದರೂ ಅದರಲ್ಲಿ ಬಿ.ಜೆ.ಪಿ. ಇರಲೇಬೇಕೆಂದು ಪೂರ್ವಕರಾರು ಹಾಕುತ್ತಿರುವುದು ಸೋಜಿಗ.

ಒಂದು ಹಂತ :

ಈಗ ಅಸ್ತಿತ್ವಕ್ಕೆ ಬಂದಿರುವ ಆರು ಪಕ್ಷಗಳ ಒಕ್ಕೂಟವು ಸರ್ವಾಧಿಕಾರ ವಿರೋಧಿ, ಜಾತ್ಯತೀತ ಮತ್ತು ವಿಚಾರವಾದಿ ಶಕ್ತಿಗಳ ವಿಶಾಲ ಐಕ್ಯತೆಯ ಬೆಳವಣಿಗೆಯಲ್ಲಿ ಒಂದು ಹಂತವಷ್ಟೆ. ಈ ಚಳುವಳಿ ಬೆಳೆದ ಹಾಗೆ, ಹೆಚ್ಚು ಹೆಚ್ಚು ಪ್ರಜಾಪ್ರಭುತ್ವವಾದಿ, ಜಾತ್ಯತೀತ ಮತ್ತು ವಿಚಾರವಾದಿ ಶಕ್ತಿಗಳು ಇದನ್ನು ಸೇರುತ್ತವೆ ಎಂಬ ಭರವಸೆ ನಮಗಿದೆ. ಚಂದ್ರಶೇಖರ್ ಅಧ್ಯಕ್ಷರಾಗಿರುವ ಜನತಾ ಪಕ್ಷವು ಈಗ ಈ ಒಕ್ಕೂಟದಿಂದ ಆಚೆಗಿರಲು ಬಯಸಿದೆ. ಆದರೆ ಮುಂದೆ ಅದು ಎರಡನೇ ಬಾರಿ ಯೋಚಿಸಿ ನಮ್ಮನ್ನು ಸೇರಬಹುದೆಂದು ಆಶಿಸುತ್ತೇವೆ. ಆದರೆ ತಮ್ಮ ಪಕ್ಷ ಈ ರಂಗವನ್ನು ಸೇರಬೇಕಾದರೆ ಬಿ.ಜೆ.ಪಿ.ಯನ್ನೂ ಸೇರಿಸಿಕೊಳ್ಳಬೇಕೆಂದು ಅವರು ಕರಾರು ಹಾಕುವುದು ತೀರ ಅಪ್ರಾಸ್ತವವಾದದ್ದು. ಕೆಲವು ತಿಂಗಳ ಹಿಂದೆ ಆರೆಸ್ಸೆಸ್ ಜೊತೆ ಸಂಬಂಧ ಕಡಿದುಕೊಂಡ ಅವರ ಪಕ್ಷದ ಕಾರ್ಯಾಚರಣೆಗೆ ಇದು ಸರಿಹೊಂದುವುದಿಲ್ಲ.

ಜನತಾ ಪಕ್ಷದ ಒಡಕಿಗೆ ಈ ಆರು ಪಕ್ಷಗಳೇ ಹೊಣೆ ಎಂದು ಚಂದ್ರಶೇಖರ್ ಆಪಾದಿಸಿರುವುದರ ಬಗ್ಗೆ ಹೇಳುವುದಾದರೆ, ಅವರಂಥ ರಾಜಕಾರಣಿಗಳು ಹೆಚ್ಚು ವಿನಯ ಮತ್ತು ಸ್ವ-ವಿಮರ್ಶೆಯನ್ನು ತೋರಿಸಬೇಕಾಗಿದೆ ಎಂದು ಹೇಳಬೇಕಷ್ಟೆ. ಆಂತರಿಕ ಜಗಳಗಳಲ್ಲಿ ನಿರತವಾಗಿದ್ದವರು ಈ ಆರು ಪಕ್ಷಗಳೋ ಅಥವಾ 1977ರ ಲೋಕಸಭೆ ಚುನಾವಣೆ ಅದನಂತರ ಪ್ರಧಾನಿ ಆಯ್ಕೆಯ ಸಮಯದಿಂದಲೇ ಶುರುಮಾಡಿದ ಜನತಾ ನಾಯಕರೋ ಎಂಬುದನ್ನು ತಿಳಿಯಬೇಕಾಗಿದೆ. ಈ ಅವಧಿಯುದ್ದಕ್ಕೂ ಪಕ್ಷದ ಅಧ್ಯಕ್ಷರಾಗಿದ್ದ ಚಂದ್ರಶೇಖರ್ ಅವರಿಗೆ, ಈ ಆಂತರಿಕ ಕಲಹಗಳು 1979ರಲ್ಲಿ ಪಕ್ಷ ನಿಜವಾಗಿ ಒಡೆಯುವುದಕ್ಕೆ ಮುನ್ನ ಅನೇಕ ಬಾರಿ ಪಕ್ಷವನ್ನು ಒಡಕಿನ ಅಂಚಿಗೆ ತಂದಿದ್ದವು ಎಂಬುದನ್ನು ನೆನಪಿಸಬೇಕಾಗಿದೆ.

ಯಾವುದು ಮುಖ್ಯ :

ಇವೆಲ್ಲವನ್ನೂ ಮರೆತು, ಜನತಾದ ಒಡಕಿನ ಹೊಣೆಯನ್ನು ಈಗ ಒಟ್ಟಿಗೆ ಸೇರಿರುವ ಆರು ಪಕ್ಷಗಳ ಹೆಗಲ ಮೇಲೆ ಜಾರಿಸುವುದು, ಚಂದ್ರಶೇಖರ್‌ರಂಥ ರಾಷ್ಟ್ರೀಯ ನಾಯಕರ ನಿಲುವಿಗೆ ಸರಿಹೊಂದುವುದಿಲ್ಲ. ಅವರು ಇನ್ನಷ್ಟು ವಾಸ್ತವ ಧೋರಣೆಯನ್ನು ತಳೆದು, ಬಿ.ಜೆ.ಪಿ.ಯೊಡನೆ ಹೊಂದಾಣಿಕೆ ಮಾಡಿಕೊಳ್ಳುವುದು ಆರು ಪಕ್ಷಗಳ ಜೊತೆ ಇರುವುದಕ್ಕಿಂತ ಮುಖ್ಯವೇ ಎಂಬುದನ್ನು ನಿರ್ಧರಿಸಲಿ ಎಂದು ನಿರೀಕ್ಷಿಸುತ್ತೇವೆ. ಏಕೆಂದರೆ ಅವರ ಹಳೆಯ ಕಾರ್ಯಗಳು, ಆಚರಣೆಗಳನ್ನು ಪರಿಶೀಲಿಸಿದ್ದರೆ, ಚಂದ್ರಶೇಖರ್ ಬಿ.ಜೆ.ಪಿ.ಗಿಂತ ಈ ಪಕ್ಷಗಳಿಗೇ ಹತ್ತಿರದವರು.

○

ಸರ್ಕಾರಿ ನೌಕರರಿಂದ ರಾಷ್ಟ್ರೀಯ ಸಮಗ್ರತೆ ಹಾಗೂ ಬೇಡಿಕೆ ದಿನಾಚರಣೆ

ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಮಹಾ ಮಂಡಲದ ಆದೇಶದಂತೆ ಮತ್ತು ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ಮನವಿಯಂತೆ ತುಮಕೂರಿನ ಎಲ್ಲಾ ರಾಜ್ಯ ಸರ್ಕಾರಿ ನೌಕರರು ತಾ. 9-9-1980 ಮತ್ತು 10-9-1980ರಂದು ಸಂಘದ ವತಿಯಿಂದ ಒದಗಿಸಲ್ಪಟ್ಟ ಲಾಂಛನಗಳನ್ನು ಧರಿಸಿ ತಮ್ಮ ತಮ್ಮ ಕಛೇರಿಗಳಲ್ಲಿ ಕೆಲಸಮಾಡಿದರು. ಈ ಎರಡು ದಿನಗಳೂ ವಿರಾಮ ವೇಳೆಯಲ್ಲಿ ತಮ್ಮ ಬೇಡಿಕೆಗಳನ್ನೊಳಗೊಂಡ ಘೋಷಣೆಗಳನ್ನು ಕೂಗಿ ಕೆಲಸ ನಿರ್ವಹಿಸಿದರು.

ತಾ. 10-9-80ರಂದು ಸಂಜೆ ನೌಕರರ ಭಾರಿ ಮೆರವಣಿಗೆಯು ಜಿಲ್ಲಾ ಕಛೇರಿ ಆವರಣದಿಂದ ಹೊರಟು ನಗರದ ಪ್ರಮುಖ ಬೀದಿಗಳಲ್ಲಿ ಹಾದು ತುಮಕೂರು ಜಿಲ್ಲಾ ಶಾಖೆಯ ಕಟ್ಟಡದ ಮುಂಭಾಗದಲ್ಲಿ ಸೇರಿ ಬಹಿರಂಗ ಸಭೆಯನ್ನು ನಡೆಯಿಸಿತು. ಮೆರವಣಿಗೆಯಲ್ಲಿ ಸಾವಿರಾರು ನೌಕರರು ಭಾಗವಹಿಸಿದ್ದಲ್ಲದೆ, ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ನೌಕರರು ಸೇರಿ ಬೇಡಿಕೆಗಳ ಘೋಷಣೆ ಕೂಗುತ್ತಾ ಸಾಗಿ ಬಂದರು. ಮೆರವಣಿಗೆಯ ನೇತೃತ್ವವನ್ನು ಜಿಲ್ಲಾ ಶಾಖೆಯ ಅಧ್ಯಕ್ಷರಾದ ಕಾಂ. ಶಿವನಂಜಯ್ಯ, ಪ್ರಧಾನ ಕಾರ್ಯದರ್ಶಿ ಕಾಂ. ಟಿ. ಕೆ. ಗೋವಿಂದರಾಜು, ಜಂಟಿ ಕಾರ್ಯದರ್ಶಿ ಕಾಂ. ಸಿ. ಬಿ. ಸತ್ಯನಾರಾಯಣ, ನಾಗರಾಜ್, ಶಾಂತಪ್ಪ ಹಾಗೂ ರಾಘವೇಂದ್ರರಾವ್ ಅವರುಗಳು ವಹಿಸಿದ್ದರು. ಮೆರವಣಿಗೆಯ ನಂತರ ಬಹಿರಂಗ ಸಭೆಯನ್ನುದ್ದೇಶಿಸಿ ಕಾಂ.ಗಳಾದ ಸಿ.ಜಿ. ಸತ್ಯನಾರಾಯಣ ಟಿ.ಕೆ. ಗೋವಿಂದರಾಜು, ಎಂ. ಶಿವನಂಜಯ್ಯ ಮತ್ತು ರಾಘವೇಂದ್ರರಾವ್ ರವರುಗಳು ಮಾತನಾಡಿದರು. ಈ ಮಹಾಸಭೆಯಲ್ಲಿ ರಾಷ್ಟ್ರೀಯ ಸಮಗ್ರತೆಯನ್ನು, ನೌಕರರ ಬೇಡಿಕೆಗಳನ್ನು ಮತ್ತು ರೈತರ ಬೇಡಿಕೆಗಳನ್ನು ಬೆಂಬಲಿಸಿ ನಿರ್ಣಯಗಳನ್ನು ಸರ್ವಾನುಮತದಿಂದ ಅಂಗೀಕರಿಸಿದ್ದಲ್ಲದೆ, ಈ ನಿರ್ಣಯಗಳನ್ನು ಪ್ರಧಾನಮಂತ್ರಿಯವರಿಗೂ ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಗಳಿಗೂ, ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಮಹಾ ಮಂಡಲಕ್ಕೂ, ಕರ್ನಾಟಕ ರಾಜ್ಯ ನೌಕರರ ಕೇಂದ್ರ ಸಂಘಕ್ಕೂ ಕಳುಹಿಸಿಕೊಡಲಾಯಿತು.

○

ಚಂದಾ ವಿವರ

ಬಿಡಿಪ್ರತಿ	:	50 ಪೈಸೆ
6 ತಿಂಗಳಿಗೆ	:	13 ರೂ.
ಒಂದು ವರ್ಷಕ್ಕೆ	:	25 ರೂ.

ಮಂಗಳೂರು ರಿಕ್ಷಾ ಚಾಲಕರು ಹೋರಾಟದತ್ತ

ದ. ಕ. ಜಿಲ್ಲಾ ರಿಕ್ಷಾ ಚಾಲಕರ ಸಂಘದ ಕಾರ್ಯಕಾರಿ ಸಮಿತಿಯ ಸಭೆಯು ಸಂಘದ ಉಪಾಧ್ಯಕ್ಷರಾದ ಶ್ರೀಯುತ ಕೆ. ಅಬೂಬಕ್ಕರ್ ಅವರ ಅಧ್ಯಕ್ಷತೆಯಲ್ಲಿ ತಾ. 11-9-1980 ಮಧ್ಯಾಹ್ನ ಘಂಟೆ 3-30ಕ್ಕೆ ಸಂಘದ ಆಫೀಸಿನಲ್ಲಿ ಜರಗಿತು 4-9-1980 ರಂದು ಮಂಗಳೂರಿನಿಂದ ಬೆಂಗಳೂರಿಗೆ ಹೋದ ನಿಯೋಗವು ಕರ್ನಾಟಕ ಸರಕಾರದ ಗೃಹ ಕಾರ್ಯದರ್ಶಿಯವರನ್ನು ಕಂಡು ದ. ಕ. ಜಿಲ್ಲಾ ರಿಕ್ಷಾ ಚಾಲಕರ ಸಮಸ್ಯೆಗಳ ಬಗ್ಗೆ ಮಾತುಕತೆ ನಡೆಸಿದುದನ್ನು ಸಭೆಯು ಮುಂದಿಡಲಾಯಿತು. ತಾ. 9-11-80 ರಂದು ದ. ಕ. ಜಿಲ್ಲಾ ಸಾರಿಗೆ ಅಧಿಕಾರಿಗಳವರಿಂದ ಯೂನಿಯನ್ನಿಗೆ ಬಂದ ನೋಟಿಫಿಕೇಶನ್ನು ಸಭೆಯು ಚರ್ಚಿಸಿತು. ಹಲವಾರು ವರ್ಷಗಳಿಂದ ಮಂಗಳೂರು ರಿಕ್ಷಾ ಚಾಲಕರು ರಿಕ್ಷಾವನ್ನು ಮೀಟರ್ ಅಳವಡಿಸಿ ನಡೆಸಲು, ಮಂಗಳೂರಿಗೆ ಪ್ರತ್ಯೇಕ ದರವನ್ನು ಸರಕಾರದೊಡನೆ ಹಲವಾರು ಬಾರಿ ಕೇಳಿಕೊಂಡಿದ್ದರೂ ಅದನ್ನು ಕಡೆಗಣಿಸಿ ಯಾವುದೋ ದುರುದ್ದೇಶದಿಂದ ದ. ಕ ಜಿಲ್ಲಾ ಚಾಲಕರ ಹಿತವನ್ನು ಕಡೆಗಣಿಸಿ, ಚಾಲಕ ಪ್ರಯಾಣಿಕರೊಳಗೆ ಬಿಕ್ಕಟ್ಟು ಇನ್ನೂ ಜಾಸ್ತಿಮಾಡುವಂತೆ ಬೆಂಗಳೂರಿನ ರಿಕ್ಷಾ ಬಾಡಿಗೆ ದರವನ್ನು ಮಂಗಳೂರಿನಲ್ಲಿ ವಸೂಲಿ ಮಾಡುವಂತೆ ಕಟ್ಟಾಜ್ಞೆ ಮಾಡಿರುವುದನ್ನು ಒಗ್ಗಟ್ಟಿನಿಂದ ವಿರೋಧಿಸಿ ಇದನ್ನು ಶಾಂತಿಯುತ ಧರಣಿ ಸತ್ಯಾಗ್ರಹ, ಅನಿರ್ಧಿಷ್ಟಾವಧಿ ಜಿಲ್ಲಾ ರಿಕ್ಷಾ ಬಂದ್, ಮುಂತಾದ ಕಾರ್ಯಕ್ರಮಗಳನ್ನು ಕೈಗೊಂಡು ಸರಕಾರವನ್ನು ಎಬ್ಬಿಸಿ ಬೇಡಿಕೆಗಳ ಬಗ್ಗೆ ಶೀಘ್ರ ಕ್ರಮ ಕೈಗೊಳ್ಳುವಂತೆ ಮಾಡಲು ಸಭೆಯಲ್ಲಿ ಸರ್ವಾನುಮತಿಯಿಂದ ನಿರ್ಧರಿಸಲಾಯಿತು.

●

ಹೋಟೆಲ್ ಕಾರ್ಮಿಕರಿಗೆ ಭರವಸೆ

ಗ್ರಾಂಡ್ ನ್ಯಾಷನಲ್ ಹೋಟೆಲ್‌ನ ಕಾರ್ಮಿಕರು ಸಿ.ಐ.ಟಿ.ಯು. ನೇತೃತ್ವದಲ್ಲಿ 110 ದಿನಗಳಿಂದ ಮುಷ್ಕರ ನಡೆಸುತ್ತಿದ್ದರು. ಈಗ ಮಾಲೀಕರು ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿ ಎಲ್ಲ ಕಾರ್ಮಿಕರಿಗೂ ಕೆಲಸ ನೀಡಲು ಒಪ್ಪಿದ್ದಾರೆ. ಹೋಟೆಲ್ ಮುಚ್ಚಿದ ಮಾಲೀಕರು ಹಿಂದೆ ಕೆಲಸಗಾರರಿಗೆ ಪರಿಹಾರಧನ ನೀಡಿದ್ದರು. ಈಗಿನ ಹೊಸ ಒಪ್ಪಂದಕ್ಕೆ ಮಾಲೀಕರ ಸಂಘದ ಪರವಾಗಿ ಮೊಹಮ್ಮದಾಲಿ, ಕಾರ್ಮಿಕ ಸಂಘದ ಪರವಾಗಿ ವಿ. ಜೆ. ಕೆ. ನಾಯರ್, ಇ.ಕೆ.ಎನ್. ರಾಜನ್, ಮಾಲೀಕರ ಪರ ಕೆ.ವಿ. ಅಬ್ದುಲ್ಲ ಸಹಿ ಹಾಕಿದ್ದಾರೆ.

ಹೋರಾಟಕ್ಕೆ ಸಹಾಯ ನೀಡಿದ ಎಲ್ಲರಿಗೂ ಬೆಂಗಳೂರು ಜಿಲ್ಲಾ ಹೋಟೆಲ್ ಕಾರ್ಮಿಕರ ಸಂಘ ವಂದನೆಗಳನ್ನು ಸಲ್ಲಿಸುತ್ತದೆ.

●

ಸಿ.ಐ.ಟಿ.ಯು. ಕಾರ್ಯಕರ್ತರ ಮೇಲೆ

ಮಂಗಳೂರು ಜಪ್ಪು ಕಾಮನ್‌ವೆಲ್ತ್ ಟ್ರೈಲ್ ಫ್ಯಾಕ್ಟರಿಯಲ್ಲಿ ದುಡಿಯುವ ಕಾರ್ಮಿಕರ ಹಾಗೂ ಎಸ್. ಕೆ. ಟ್ರೈಲ್ ವರ್ಕ್ಸ್ ಯೂನಿಯನ್ನಿನ ಕಾರ್ಯಕಾರಿ ಸಮಿತಿ ಸದಸ್ಯರೂ ಆದ ಶ್ರೀ ಸಿಲ್ವೆಸ್ಟರ್ ಡಿಸೋಜ ಎಂಬವರು ತಾ. 11-9-80ರಂದು ಬೆಳಿಗ್ಗೆ ಕಾರ್ಖಾನೆ ಕೆಲಸಕ್ಕೆ ಸೈಕಲಿನ ನೇತ್ರಾವತಿ ಸಂಕದ ಮೇಲೆ ಬರುತ್ತಿರುವಾಗ ಸುಮಾರು ಆರು ಜನ ಗೂಂಡಾಗಳೂ ಕಾರಿನಲ್ಲಿ ಬಂದು ಅವರನ್ನು ಸೈಕಲ್ಲಿನಿಂದ ಎಳೆದು ಹಾಕಿ ಹೊಡೆದು ಬ್ಲೇಡಿನಿಂದ ಗೀರಿ ತೀವ್ರವಾಗಿ ಜಖಂಗೊಳಿಸಿದ್ದಾರೆ. ಇವರಿಗೆ ಕಳೆದ ವರುಷವು ಇದೇ ರೀತಿ ಐ. ಎನ್. ಟಿ. ಯು. ಸಿ.ಯ ಕೆಲ ಗೂಂಡಾಗಳು ಹೊಡೆದಿದ್ದು ಈ ಘಟನೆಕೂಡಾ ಐ. ಎನ್. ಟಿ. ಯು. ಸಿ. ಯವರಿಂದಲೇ ನಡೆದುದೆಂದು ಶಂಕಿಸಲಾಗಿದೆ. ಸಿಲ್ವೆಸ್ಟ್ರ ಡಿಸೋಜರ ಮೇಲೆ ನಡೆಸಿದ ಈ ಅಮಾನುಷ ರೀತಿಯ ಹಲ್ಲೆಯನ್ನು ಎಸ್. ಕೆ. ಟ್ರೈಲ್ ವರ್ಕ್ಸ್ ಯೂನಿಯನ್ನಿನ ಕಾರ್ಯಕಾರಿ ಸಮಿತಿಯು ಖಂಡಿಸಿ ಗೂಂಡಾಗಿರಿ ನಡೆಸಿದವರ ಮೇಲೆ ಕ್ರಮವಹಿಸಲು ಪೋಲೀಸ್ ಇಲಾಖೆಯನ್ನು ಒತ್ತಾಯಿಸಿದೆ. ○

ತುಟ್ಟಿಭತ್ತೆ ಸಲ್ಲಿಕೆಗೆ ಅಭಿನಂದನೆಗೆ

ಮುನಿಸಿಪಲ್ ನೌಕರರಿಗೂ ಮೂರು ಅಡಿಷನಲ್ ತುಟ್ಟಿಭತ್ಯಗಳನ್ನು ಮಂಜೂರು ಮಾಡಿರುವುದಕ್ಕಾಗಿ ಕರ್ನಾಟಕ ರಾಜ್ಯ ಮುನಿಸಿಪಲ್ ನೌಕರರ ಫೆಡರೇಶನ್ನಿನ ಉಪಾಧ್ಯಕ್ಷರಾದ ಎನ್. ಕೆ. ಉಪಾಧ್ಯಾಯ ಅವರು ಸಚಿವ ಧರ್ಮಸಿಂಗ್ ಅವರನ್ನು ಅಭಿನಂದಿಸಿದ್ದಾರೆ. ಇದನ್ನು ಹಿಂದಿನ ಅವಧಿಯಿಂದ ಜಾರಿ ಮಾಡಬೇಕೆಂದು ಅವರು ಕೋರಿದ್ದಾರೆ.

●

ಸಾಲ ಮರುಪಾವತಿಗಾಗಿ ರೈತರ ಒತ್ತಾಯ

ಬೆಳ್ತಂಗಡಿ : ತಾ. 25-8-1980 ರಂದು ದ. ಕ. ಜಿಲ್ಲಾ ಬೆಳ್ತಂಗಡಿ ತಾಲ್ಲೂಕು ಉಜಿರೆ ರೈತ ಸೇವಾ ಸಹಕಾರೀ ಸಂಘದ ಕಚೇರಿ ಎದುರು ಉಜಿರೆ ಗ್ರಾಮದ ನೂರಾರು ಜನ ರೈತರು, ರೈತರ ಮೇಲಿನ ಸಾಲದ, ವಸೂಲಿ ಕ್ರಮ ಮತ್ತು ಜಪ್ತಿ ನೋಟೀಸುಗಳನ್ನು ಕೂಡಲೇ ರದ್ದುಪಡಿಸಬೇಕೆಂದೂ, ಸರಕಾರ ಈಗಾಗಲೇ ರೈತರ ಸಾಲಗಳ ವಿನಾಯಿತಿಗಾಗಿ ನಿಗದಿಪಡಿಸಿದ್ದ ರೂ. 85 ಕೋಟಿಯ ಪ್ರಯೋಜನವನ್ನು ಇಲ್ಲಿನ ರೈತರಿಗೂ ಅನ್ವಯಿಸುವಂತಾಗಬೇಕೆಂದೂ ಒತ್ತಾಯಿಸಿ ಮತಪ್ರದರ್ಶನ ನಡೆಸಿ ಮನವಿಯನ್ನರ್ಪಿಸಿದರು. ರೈತರ ನೇತೃತ್ವವನ್ನು ಬೆಳ್ತಂಗಡಿ ತಾಲ್ಲೂಕು ರೈತಸಂಘದ ಕಾರ್ಯದರ್ಶಿ ಕಾಂ. ಕೆ. ವಿ ರಾವ್ ಮತ್ತು ಕಾಂ. ಬಿ ವಿಷ್ಣುಮೂರ್ತಿಯವರು ವಹಿಸಿದ್ದರು.

ಇದೇ ರೀತಿ ಸಾಲ ರದ್ದತಿ ಮತ್ತು ಜಪ್ತಿಗಳ ರದ್ದತಿಯನ್ನು ಒತ್ತಾಯಿಸಿ ರೈತಸಂಘದ ನೇತೃತ್ವದಲ್ಲಿ ತಾ. 1-9-1980ರಂದು ಮುಂಡಾಜೆ ರೈತ ಸೇವಾ ಸಹಕಾರೀ ಸಂಘದ ಕಚೇರಿಯೆದುರು ಕೂಡಾ ನಡೆಯಿತು. ಈ ಬಗ್ಗೆ ಮುಖ್ಯಮಂತ್ರಿಯವರಿಗೆ ರೈತಸಂಘದ ವತಿಯಿಂದ ಮನವಿಯನ್ನರ್ಪಿಸಲಾಯಿತು. ●

ಸಮನ್ವಯ ಸಮಿತಿಗೆ ಇ.ಎಂ.ಎಸ್. ಸಂಚಾಲಕರು

ಲೋಕದಳ, ಸಿ.ಪಿ.ಐ.(ಎಂ), ಸಿ.ಪಿ.ಐ, ಕಾಂಗ್ರೆಸ್(ಯು), ಆರ್.ಎಸ್.ಪಿ. ಮತ್ತು ಫಾರ್ವರ್ಡ್ ಬ್ಲಾಕ್‌ಗಳು ಸೆಪ್ಟೆಂಬರ್ ಎರಡರಂದು ಸಭೆ ಸೇರಿ ಬೆಲೆ ಏರಿಕೆ ತಡೆ, ಕೋಮು ಸೌಹಾರ್ದ, ನಾಗರಿಕ ಹಕ್ಕುಗಳ ರಕ್ಷಣೆ ಮುಂತಾದ ವಿಚಾರಗಳ ಬಗ್ಗೆ ಜನಪ್ರಿಯ ಹೋರಾಟಗಳನ್ನು ಬೆಳೆಸಲು ಸಮನ್ವಯ ಸಮಿತಿಯೊಂದನ್ನು ರಚಿಸಿವೆ. ಇದರಲ್ಲಿ ಲೋಕದಳದ ಮಧು ಲಿಮಯೆ ಮತ್ತು ರಬಿರಾಯ್, ಸಿ. ಪಿ. ಐ (ಎಂ)ನ ಇ.ಎಂ.ಎಸ್. ನಂಬೂದಿರಿಪಾಡ್ ಮತ್ತು ಎಂ. ಬಸವಪುನ್ನಯ್ಯ, ಸಿ ಪಿ ಐ ನ ಸಿ ರಾಜೇಶ್ವರ ರಾವ್ ಮತ್ತು ಭೂಪೇಶ್ ಗುಪ್ತ, ಕಾಂಗ್ರೆಸ್(ಯು)ನ ತಾರಕೇಶ್ವರಿ ಸಿನ್ಹ ಮತ್ತು ಇನ್ನೊಬ್ಬರು. ಆರ್. ಎಸ್. ಪಿ.ನ ತ್ರಿದಿಬ್ ಚೌಧರಿ ಮತ್ತು ಪ್ರಫುಲ್ ಚೌಧುರಿ. ಫಾರ್ವರ್ಡ್ ಬ್ಲಾಕ್‌ನ ಚಿತ್ತಬಸು ಮತ್ತು ಡಿ. ಡಿ. ಶಾಸ್ತ್ರಿ ಇದ್ದಾರೆ. ಸಮಿತಿಗೆ ಇ. ಎಂ. ಎಸ್ ನಂಬೂದಿರಿಪಾಡ್ ಸಂಚಾಲಕರಾಗಿರುತ್ತಾರೆ.

ಎಲ್ಲ ಆರು ಪಕ್ಷಗಳ ಮತ್ತು ಸಾಮೂಹಿಕ ಸಂಘಟನೆಗಳ ಪ್ರತಿನಿಧಿಗಳನ್ನುಳ್ಳ ರಾಷ್ಟ್ರೀಯ ಸಮಾವೇಶವೊಂದನ್ನು ಸೆಪ್ಟೆಂಬರ್ 27 ಮತ್ತು 28 ರಂದು ನವದೆಹಲಿಯಲ್ಲಿ ನಡೆಸಲು ಸಮನ್ವಯ ಸಮಿತಿ ನಿರ್ಧರಿಸಿದೆ. ಒಂದು ಸಾವಿರ ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆ ಇದೆ ಈ ರಾಷ್ಟ್ರೀಯ ಸಮಾವೇಶವನ್ನು ನಡೆಸಲು ಆರು ಪಕ್ಷಗಳು ಮತ್ತು ವಿವಿಧ ಸಾಮೂಹಿಕ ಸಂಘಟನೆಗಳ ದೆಹಲಿ ಘಟಕಗಳ ಪ್ರತಿನಿಧಿಗಳನ್ನುಳ್ಳ ಸ್ವಾಗತ ಸಮಿತಿಯೊಂದನ್ನೂ ರಚಿಸಲಾಗಿದೆ.

●

ಸಂತೇಕಲ್ಲಹಳ್ಳಿಯಲ್ಲಿ ರೈತಸಂಘ ಸ್ಥಾಪನೆ

ಕೋಲಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಕೈವಾರ ಹೋಬಳಿಗೆ ಸೇರಿದ ಸಂತೇಕಲ್ಲಹಳ್ಳಿಯಲ್ಲಿ ತಾರೀಖು 27-8-80 ರಂದು ರೈತ ಸಂಘದ ಘಟಕವನ್ನು ಸ್ಥಾಪಿಸಲಾಯಿತು ಇದಕ್ಕೆ ಮೊದಲು ಜಿಲ್ಲಾ ರೈತಸಂಘದ ಮುಖಂಡರುಗಳಾದ ಕಾಂ. ಅಶ್ವತ್ಥನಾರಾಯಣ ರೆಡ್ಡಿ ಮತ್ತು ಕಾಂ. ಕುಮ್ಮಪಲ್ಲಿ ವೆಂಕಟರಾಯಪ್ಪನವರು ಅಲ್ಲಿಗೆ ತೆರಳಿ ಸೂಕ್ತ ಮಾರ್ಗದರ್ಶನ ನೀಡಿದ್ದರು. ಕಾಂ. ಎನ್. ಸೋಮಶೇಖರ್ ಅಧ್ಯಕ್ಷ, ಕಾಂ. ಜಿ. ಕೆಂಪೇಗೌಡ ಉಪಾಧ್ಯಕ್ಷ, ಕಾಂ. ಕೆ. ರಾಜಣ್ಣ ಖಜಾಂಚಿ. ಮತ್ತು ಕಾಂ. ವೆಂಕಟೇಶಗೌಡ, ಎಚ್ ನಾರಾಯಣ ಸ್ವಾಮಿ, ವೈ. ಬೈರೇಗೌಡ, ಎಸ್. ಬೈರಪ್ಪ ಹಾಗೂ ಎಂ. ಚಿನ್ನರಾಯಪ್ಪ... ಇವರುಗಳಿರುವ ಸಮಿತಿಯನ್ನು ರಚಿಸಲಾಗಿದೆ. ●

ಡಿಸ್ಟಲರಿ ಕಾರ್ಮಿಕರ ಬೇಡಿಕೆಗಳ ಜಯ

ಬೆಂಗಳೂರು ಈಸ್ಟ್ ಇಂಡಸ್ಟ್ರಿಯಲ್ ವರ್ಕರ್ಸ್ ಯೂನಿಯನ್ ನಿರಾಯು ಡಿಸ್ಟಲರಿ ಕಾರ್ಮಿಕರ ಬೇಡಿಕೆಯನ್ನು ಆಡಳಿತ ವರ್ಗಕ್ಕೆ ಮಂಡಿಸಿ, ಮಾತುಕತೆಯಲ್ಲಿ ಬಗೆಹರಿದು ಒಪ್ಪಂದವಾಗಿದೆ. ಪ್ರತಿ ಕಾರ್ಮಿಕರಿಗೂ 80 ರೂಪಾಯಿಗಳಿಂದ 120 ರೂಪಾಯಿಗಳ ವೇತನ ಮತ್ತು ತುಟ್ಟಿ ಭತ್ತೆಯಲ್ಲಿ ಹೆಚ್ಚಳವಾಗಿ ತುಟ್ಟಿಭತ್ತೆಯಲ್ಲಿ ಕನ್ಸಲಿಡೇಟ್ ಆಗಿ ಈ ವರ್ಷ 275 ರೂ. ಆಗಿದ್ದು ಮುಂದಿನ ವರ್ಷ 300 ರೂ. ಆಗಿ ಅದರ ಮುಂದಿನ ವರ್ಷ 325 ರೂ. ಆಗುವುದು. ಇದರ ಜೊತೆಗೆ ರಜೆ, ಪೂ. ಯೂನಿಫಾರಂ ಸಾಲ ಸೌಲಭ್ಯ ದೊರೆತು ಮೂರು ವರ್ಷದ ಒಪ್ಪಂದಕ್ಕೆ ಸಂಘದ ಪರವಾಗಿ ಕಾರ್ಯದರ್ಶಿ ಕಾಂ. ಜಾನ್ ವಿನ್‌ಸೆಂಟ್, ಉಪಾಧ್ಯಕ್ಷ ಕಾಂ. ನಾಗರಾಜು ಸಹಿಯನ್ನು ಹಾಕಿದ್ದಾರೆ ○



ಸೆಪ್ಟೆಂಬರ್ 10ರಂದು ಬೆಂಗಳೂರಿನಲ್ಲಿ ಸ್ಥಾನಬದ್ಧತಾ ಕಾಯ್ದೆ ತರುವುದರ ವಿರುದ್ಧ ಪ್ರತಿಭಟಿಸಲು ಸಿ. ಐ. ಟಿ. ಯು. ಕರೆ ಮೇರೆಗೆ ಕಾರ್ಮಿಕರು ರಾಜಭವನದತ್ತ ಮೆರವಣಿಗೆ ಹೋಗುತ್ತಿರುವ ದೃಶ್ಯ

ಕಾಂ. ಎ. ಕೆ. ನಾರಾಯಣ ಇನ್ನಿಲ್ಲ

(1ನೇ ಪುಟದಿಂದ)

ಮುಂದಾಳು ಕಾಮ್ರೇಡ್ ಬಿ. ವಿ. ಕಕ್ಕಿಲ್ಲಾಯ, ಇಂಟಕ್ ಮುಂದಾಳು ಶ್ರೀ ಎನ್. ಎಂ. ಅಡ್ಯಂತಾಯ ಮೊದಲಾದವರಿದ್ದರು.

ಸ್ಮಶಾನದಲ್ಲಿ ನಡೆದ ಸಂತಾಪ ಸೂಚಕ ಸಭೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿಯ ಸೆಕ್ರೆಟಾರಿಯಟ್ ಸದಸ್ಯರಾದ ಕಾಂ. ಪಿ. ರಾಮಚಂದ್ರರಾವ್, ರಾಜ್ಯ ಸಮಿತಿ ಸದಸ್ಯರಾದ ಕಾಂ. ಬಿ. ನಾರಾಯಣ ಮತ್ತು ವಿಧಾನಸಭಾ ಸದಸ್ಯರೂ ಸಿ. ಪಿ. ಐ. ಮುಖಂಡರೂ ಆದ ಕಾಂ. ಬಿ. ವಿ ಕಕ್ಕಿಲ್ಲಾಯರು ಮಾತನಾಡಿ, ಕಾಮ್ರೇಡ್ ಎ. ಕೆ. ಯವರಿಗೆ ಶ್ರದ್ಧಾಂಜಲಿಯನ್ನರ್ಪಿಸಿದರು. ಕಾಮ್ರೇಡ್ ಎ. ಕೆ. ಯವರು ನೆಚ್ಚಿದ ತತ್ವಗಳಿಗಾಗಿ ಕಾರ್ಮಿಕ-ರೈತ ವರ್ಗಗಳ ಸಖ್ಯದಲ್ಲಿ ದುಡಿಯುವ ಜನತೆಯ ರಾಜ್ಯ ಕಟ್ಟುವ ಉದ್ದೇಶದಿಂದ ನಡೆಸುವ ಹೋರಾಟದಲ್ಲಿ ಇನ್ನಷ್ಟು ಹೆಚ್ಚು ಸ್ಫೂರ್ತಿ ಮತ್ತು ನಿಷ್ಠೆಯಿಂದ ದುಡಿಯುವುದೇ ಅವರಿಗೆ ನಾವು ನೀಡಬಹುದಾದ ಅತೀ ದೊಡ್ಡ ಗೌರವವೆಂದು ಅವರು ಹೇಳಿದರು.

ಕಾಮ್ರೇಡ್ ಎ. ಕೆ. ಯವರಿಗೆ 60 ವರ್ಷ ವಯಸ್ಸಾಗಿತ್ತು. ಕಳೆದ ಒಂದು ವರ್ಷದಿಂದ ಕ್ಯಾನ್ಸರ್ ರೋಗದಿಂದ ಬಳಲುತ್ತಿದ್ದರೂ ಅವರು ತಮ್ಮ ಕೊನೆಯುಸಿರೆಳೆಯುವವರೆಗೂ ಪಕ್ಷದ ಕಾರ್ಯಕರ್ತರೊಂದಿಗೂ ಟ್ರೇಡ್ ಯೂನಿಯನ್ ಕಾರ್ಯಕರ್ತರೊಂದಿಗೂ ಚರ್ಚಿಸುತ್ತಾ ಅವರಿಗೆ ಮಾರ್ಗದರ್ಶನವನ್ನೂ ಸ್ಫೂರ್ತಿಯನ್ನೂ ನೀಡುತ್ತಿದ್ದರು. ಇಬ್ಬರು ಪುತ್ರರನ್ನೂ, ಒಬ್ಬ ಪುತ್ರಿಯನ್ನೂ ಅಗಲಿದ ಕಾಮ್ರೇಡ್ ಎ. ಕೆ. ಯವರ ಪತ್ನಿ ಕಾಮ್ರೇಡ್ ಎ. ಜಾನಮ್ಮ ನಮ್ಮ ಮಹಿಳಾ ಮುಂದಾಳುಗಳಲ್ಲೊಬ್ಬರಾಗಿದ್ದು, ಈಗ ಸಿ ಐ ಟಿ ಯು. ದ. ಕ. ಜಿಲ್ಲಾ ಸಮಿತಿಯ ಜೊತೆ ಕಾರ್ಯದರ್ಶಿ ಮತ್ತು ಕ್ಯಾಶ್ಯೂ ಅಂಡ್ ಅಲೈಡ್ ವರ್ಕರ್ಸ್ ಯೂನಿಯನಿನ ಉಪಾಧ್ಯಕ್ಷೆಯಾಗಿರುತ್ತಾರೆ.

ಐಕ್ಯರಂಗ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸಮಿತಿಯು ಕಾಮ್ರೇಡ್ ಎ. ಕೆ. ನಾರಾಯಣರಿಗೆ ಶ್ರದ್ಧಾಂಜಲಿಯನರ್ಪಿಸುತ್ತವೆ. ಪಕ್ಷ ರಾಜ್ಯಸಮಿತಿ ಪರವಾಗಿ ಕಾಂ. ಎಂ. ಕೆ ಭಟ್‌ರವರು, ಸಿ. ಐ. ಟಿ. ಯು ರಾಜ್ಯಸಮಿತಿ ಪ್ರಧಾನ ಕಾರ್ಯದರ್ಶಿ ಕಾಂ. ಸಿ ನಂಜುಂಡಪ್ಪನವರು ರಾಜ್ಯಸಮಿತಿ ಪರವಾಗಿಯೂ, ಸಿ. ಐ. ಟಿ. ಯು. ದ. ಕ ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ. ಮುಹಬ್ಬನವರು ಜಿಲ್ಲಾ ಸಮಿತಿ ಪರವಾಗಿಯೂ, ಸಿ.ಪಿ ಐ (ಎಂ) ದ ಕ. ಜಿಲ್ಲಾ ಸಮಿತಿ ಕಾರ್ಯದರ್ಶಿಯವರು ಪಾರ್ಟಿ ಜಿಲ್ಲಾ ಸಮಿತಿ ಪರವಾಗಿಯೂ, ಇನ್ನಿತರ ಹಲವು ಸಂಘಟನೆಗಳೂ ಕಾಮ್ರೇಡ್ ಎ. ಕೆ. ಯವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿರುವರು. ●

ಪ್ರಗತಿಪರ ಜನತಂತ್ರರಂಗ ರಚಿಸಲು ಸಿದ್ಧತೆ

(1ನೇ ಪುಟದಿಂದ)

(ಯು), ಸಿ. ಪಿ, ಐ (ಎಂ), ಸಿ. ಪಿ. ಐ, ಲೋಕದಳ ಪಕ್ಷಗಳ ಪ್ರತಿನಿಧಿಗಳಲ್ಲದೆ, ಪ್ರಗತಿಶೀಲ ಪಕ್ಷೇತರರೂ ಮತ್ತು ರಾಷ್ಟ್ರೀಯ ಕಾರ್ಮಿಕ ಸಂಘಗಳಾದ ಎಚ್. ಎಂ. ಎಸ್., ಸಿ. ಐ. ಟಿ. ಯು ಮತ್ತು ಎ. ಐ. ಟಿ. ಯು. ಸಿ. ಪ್ರತಿನಿಧಿಗಳು ಕೂಡ ಇರುವರು. ರೈತರ, ಕೃಷಿಕೂಲಿಗಾರರ, ಕಾರ್ಮಿಕರ, ವಿದ್ಯಾರ್ಥಿ-ಯುವಜನತೆಯ, ಬುದ್ಧಿಜೀವಿಗಳ ಮತ್ತು ಜನಸಾಮಾನ್ಯರ ಹಾಗೂ ಅಲ್ಪಸಂಖ್ಯಾತರ ಮತ್ತು ದಲಿತ ಜನರ ಹೋರಾಟಕ್ಕೆ ರೂಪ ಕೊಡುವ ಈ ವೇದಿಕೆಗೆ "ಪ್ರಗತಿಪರ ಜನತಂತ್ರ ರಂಗ" ಎಂಬ ಹೆಸರಿಡಬೇಕೆಂದೂ ಇದನ್ನು ಸಮಾವೇಶದಲ್ಲಿ ನಿರ್ಣಯಿಸಬೇಕೆಂದೂ ಅಭಿಪ್ರಾಯ ಮಾಡಲಾಯಿತು.

16-9-80ರಂದು ಸೇರಿದ್ದ ಸಭೆಗೆ ರಾಜ್ಯದ ಜನತಾಪಕ್ಷವನ್ನೂ ಆಹ್ವಾನಿಸಲಾಗಿತ್ತು. ಆದರೆ, ಅವರ ಪ್ರತಿನಿಧಿಗಳು ಬಂದಿರಲಿಲ್ಲ. ಹಾಗಿದ್ದರೂ ಜನತಾಪಕ್ಷವು ಈ ಪ್ರಯತ್ನಕ್ಕೆ ಬೆಂಬಲಿಸಿತ್ತು. ಈ ಕೂಟಕ್ಕೆ ಬಂದೀತೆಂದು ಆಶಿಸಲಾಯ್ತು, ಮತ್ತು ಜನತಾಪಕ್ಷವೂ ಇದನು ಸೇರುವಂತೆ ಸಭೆಯಲ್ಲಿ ಜನತಾಪಕ್ಷಕ್ಕೆ ಕರೆಕೊಡಲಾಯಿತು. ಇತರ ಪ್ರಗತಿಶೀಲ ವ್ಯಕ್ತಿಗಳೂ ವಿದ್ಯಾರ್ಥಿ-ಯುವಜನ ಸಂಘ ಸಂಸ್ಥೆಗಳೂ ಮತ್ತು ಇತರೇ ಪ್ರಗತಿಶೀಲ ಸಂಘಗಳೂ ಈ ಪ್ರಯತ್ನಕ್ಕೆ ಸಹಕರಿಸಲು ವಿನಂತಿಸಲಾಗಿದೆ.

ಇತ್ತೀಚೆಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಭಾರತ ಕಮ್ಯುನಿಸ್ಟ್ ಪಕ್ಷದ ರಾಜ್ಯ ಘಟಕಗಳ ಪ್ರತಿನಿಧಿಗಳು ಸೇರಿ ಜನತೆಯ ಸಮಸ್ಯೆಗಳ ಪರಿಹಾರಕ್ಕಾಗಿ ಒಂದಾಗಿ ಹೋರಾಡಲು ತೀರ್ಮಾನಿಸಿದ್ದು, ಸಮಸ್ಯೆಗಳ ಪರಿಹಾರಕ್ಕಾಗಿ ಸಮಾನ ಅಭಿಪ್ರಾಯವುಳ್ಳವರ ಒಂದು ವಿಶಾಲ ರಂಗವನ್ನು ರಚಿಸುವತ್ತ ಪ್ರಯತ್ನಿಸಲು ಮುಂದಾಗಿದ್ದರು. ಈಗ ಕಾಂಗ್ರೆಸ್ (ಯು), ಸಿ. ಪಿ. ಐ. (ಎಂ), ಸಿ. ಪಿ. ಐ., ಲೋಕದಳ ಮತ್ತು ಕೆಲವು ಪ್ರಗತಿಶೀಲ ಪಕ್ಷೇತರರು ಸೇರಿ ಮಾಡಿದ ತೀರ್ಮಾನ ಈ ದಿಸೆಯಲ್ಲಿ ಇನ್ನೊಂದು ಹೆಜ್ಜೆ ಮುನ್ನಡೆದಂತಾಗಿದೆ. ●

ಬೀಡಿ ಕಾರ್ಮಿಕರಿಗೆ ಬೋನಸ್ ಪಾವತಿ


ದ. ಕ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕು ಮದ್ದಡ್ಕದಲ್ಲಿರುವ ಭಾರತ್ ಬೀಡಿ ಕೆಲಸಗಾರರಿಗೆ ಕಂಟ್ರಾಕ್ಟುದಾರರು ಕೊಡುವ ತೊಂದರೆಯಿಂದಾಗಿ 1980ರ ಏಪ್ರಿಲ್ ತಿಂಗಳಲ್ಲಿ ಕೊಡಬೇಕಾದ ಬೋನಸ್ 1980ರ ಆಗಸ್ಟ್ ಕೊನೆಯವರೆಗೂ ಪಾವತಿಯಾಗಿರಲಿಲ್ಲ.

ಬೆಳ್ತಂಗಡಿ ತಾಲ್ಲೂಕು ಬೀಡಿಕೆಲಸಗಾರರ ಸಂಘದ ವತಿಯಿಂದ ಈ ಬಗ್ಗೆ ಬೀಡಿಕಾರ್ಮಿಕರು ಮಾಲಕರನ್ನು ಒತ್ತಾಯಿಸಿದಾಗ ನಂತರ ಕೊನೆಗೆ ತಾ. 5-9-1980ರಂದು ಬೋನಸ್ ಪಾವತಿಮಾಡಲು ಮುಂದೆ ಬಂದರು. ಆದರೆ ಕಾರ್ಮಿಕರ ಲೆಕ್ಕದಲ್ಲಿರುವ ಎಲ್ಲಾ ಬೀಡಿಗಳೂ ಕಂಟ್ರಾಕ್ಟುದಾರರ ಮನೆಯವರ ಹೆಸರಿನ ಪಾಸ್ ಬುಕ್‌ಗಳಲ್ಲೇ ಬರೆದು ಕಾರ್ಮಿಕರ ಲೆಕ್ಕದಲ್ಲಿ ಕೇವಲ ಹೆಸರಿಗೆ ತಕ್ಕ ಬೋನಸ್ ಇತ್ತು. ಇದನ್ನು ಪ್ರತಿಭಟಿಸಿ ಕಾರ್ಮಿಕರು ಬೋನಸ್ ಪಾವತಿಮಾಡಲು ಬಂದ ಕಂಟ್ರಾಕ್ಟರ್ ಮತ್ತು ಮಾಲಕರ ಪ್ರತಿನಿಧಿಗಳನ್ನು ಘೆರಾವೋ ನಡೆಸಿದರು. ಕೊನೆಗೆ ಈ ಬಗ್ಗೆ ತಾ. 8-9-1980ರಂದು ಬಂಟ್ವಾಳ ಬೀಡಿಕೆಲಸಗಾರರ ಸಂಘದ ಕಚೇರಿಯಲ್ಲಿ ಒಪ್ಪಂದ ನಡೆದು ಕಾರ್ಮಿಕರ ಲೆಕ್ಕದಲ್ಲಿಲ್ಲದ ಸುಮಾರು ರೂ 900/- ಬೋನಸ್ಸಿನ ಹಣವನ್ನು ಕಾರ್ಮಿಕರಿಗೆ ಕೊಡಿಸಲಾಯಿತು. ಈ ಹೋರಾಟದ ನೇತೃತ್ವವನ್ನು ಕಾಂ. ಬಿ. ವಿಷ್ಣುಮೂರ್ತಿ, ಕಾಂ. ಮಂಜುನಾಥ್, ಕಾಂ. ಸಂಜೀವ ಬಂಗೇರ ಕಾಂ. ಮಂಜುನಾಥ ಸಫಲ್ಯ ಮುಂತಾದವರು ವಹಿಸಿದ್ದರು. ○

ಶಿಡ್ಲಘಟ್ಟದಲ್ಲಿ ಯುವಜನರಿಂದ ಪ್ರತಿಭಟನೆ

ತಾ.15-9-80ರ ಸೋಮವಾರ ಕೋಲಾರ ಜಿಲ್ಲಾ ಶಿಡ್ಲಘಟ್ಟದಲ್ಲಿ ಪ್ರಜಾಸತ್ತಾತ್ಮಕ ಯುವಜನ ಸಂಘದ ಆಶ್ರಯದಲ್ಲಿ ಟೌನ್ ಮುಖ್ಯ ಬೀದಿಗಳಲ್ಲಿ, ನಿರುದ್ಯೋಗ ಭತ್ತೆ ಕೊಡಿ ಇಲ್ಲ ಕೆಲಸ ಕೊಡಿ, ಪುರಸಭೆಯವರೇ ಕುಡಿಯುವ ನೀರು ಒದಗಿಸಿ, ಮೆದುಳು ಜ್ವರ ಬಗ್ಗೆ ಕ್ರಮ ವಹಿಸಿ, ಬಾಗೇಪಲ್ಲಿ ಪೋಲೀಸ್ ಸುಳ್ಳು ಮೊಕದ್ದಮೆಗಳನ್ನು ವಾಪಸ್ ಪಡೆಯಬೇಕು ಎಂಬಿತ್ಯಾದಿ ಘೋಷಣೆಗಳೊಂದಿಗೆ ಬೃಹತ್ ಮೆರವಣಿಗೆ ನಡೆಯಿತು. ಸಭೆಯ ಅಧ್ಯಕ್ಷತೆ ಡಾ. ವಿ. ನಾಗರಾಜು ವಹಿಸಿದ್ದರು. ಸಭೆಯನ್ನು ಉದ್ದೇಶಿಸಿ ಕಾಂ. ಜಿ.ವಿ. ಶ್ರೀರಾಮರೆಡ್ಡಿ, ನಾರಾಯಣ ಸ್ವಾಮಿ, ಬೈರಾರೆಡ್ಡಿ, ಕಾಂತರಾಜು ಮಾತನಾಡಿದರು. ಕಾಂ. ವೆಂಕಟರಮಣರೆಡ್ಡಿ ಸ್ವಾಗತಿಸಿದರು. ಕಾಂ. ರಾಮಚಂದ್ರಪ್ಪ ವಂದನಾರ್ಪಣೆ ಮಾಡಿದರು. ●

ಕಾಂ. ಸೂರಿಯವರು ವಿದೇಶಕ್ಕೆ



ಡಬ್ಲ್ಯೂ. ಎಫ್. ಟಿ ಯು. ಆಹ್ವಾನದ ಮೇರೆಗೆ ಬಲ್ಗೇರಿಯಾದ ಸೋಫಿಯಾ ನಗರದಲ್ಲಿ ನಡೆಯಲಿರುವ "ನಿಶ್ಶಸ್ತ್ರೀಕರಣದ ಮೇಲಿನ ಕಾರ್ಮಿಕ ನಾಯಕರ ದುಂಡುಮೇಜಿನ ಸಮ್ಮೇಳನ" ಮತ್ತು "ಶಾಂತಿಗಾಗಿ ವಿಶ್ವ ಜನತಾ ಸಂಸತ್"ನ ಸಭೆಯಲ್ಲಿ ಹಾಗೂ ಮಾಸ್ಕೋದಲ್ಲಿ ಜರಗಲಿರುವ "ಡಬ್ಲ್ಯು. ಎಫ್. ಟಿ ಯು. ಮಹಾಮಂಡಲಿ" ಸಭೆಯಲ್ಲಿ ಭಾಗವಹಿಸಲು, ಸಿ. ಐ. ಟಿ. ಯು. ವಿನ ಪ್ರತಿನಿಧಿಯಾಗಿ ಕಾಂ. ಎಸ್. ಸೂರ್ಯನಾರಾಯಣರಾವ್‌ರವರು ದಿನಾಂಕ 16-9-80ರಂದು ಸಾಯಂಕಾಲ ಬೆಂಗಳೂರಿನಿಂದ ವಿಮಾನ ಮೂಲಕ ಪ್ರಯಾಣ ಮಾಡಿದರು. ಕಾಂ. ಸೂರಿಯವರು ಪಶ್ಚಿಮ ಜರ್ಮನಿಗೂ ಭೇಟಿ ಕೊಡಲಿರುವರು.

ವಿದೇಶ ಪ್ರಯಾಣಕ್ಕೆ ಹೊರಟ ಕಾಂ. ಸೂರಿಯವರನ್ನು ಬೆಂಗಳೂರು ವಿಮಾನ ನಿಲ್ದಾಣದಲ್ಲಿ ನೂರಾರು ಜನ ಬೀಳ್ಕೊಟ್ಟರು. ನೆಚ್ಚಿನ ನಾಯಕನನ್ನು ಬೀಳ್ಕೊಡಲು ನೆರೆದ ನೂರಾರು ಕಾರ್ಮಿಕರ ಘೋಷಣೆಗಳು ವಿಮಾನ ಹೊರಟುಹೋಗುವ ತನಕವೂ ಕೇಳಿ ಬರುತ್ತಿತ್ತು. ಕಾಂ. ಎಂ, ಕೆ. ಭಟ್, ಕಾ. ವಿ. ಜಿ. ಕೆ. ನಾಯರ್ ಮತ್ತು ಇತರ ಹಲವು ಕಾಮ್ರೇಡ್‌ಗಳೂ ಬೀಳ್ಕೊಡಲು ಬಂದಿದ್ದರು.

ಕುಂದಾಪುರ ತಾಲೂಕು ಎಸ್. ಎಫ್. ಐ. ಸಮಿತಿ

ತಾ. 11-9-1980ರ ಗುರುವಾರ ದ. ಕ. ಜಿಲ್ಲೆಯ ಕುಂದಾಪುರ ತಾಲ್ಲೂಕು ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್. ಎಫ್. ಐ.) ಸಭೆಯು ನಡೆದು 1980-81ನೇ ಸಾಲಿನ ತಾಲ್ಲೂಕು ಸಮಿತಿಯನ್ನು ರಚಿಸಲಾಯಿತು.

ಅಧ್ಯಕ್ಷರಾಗಿ ಶ್ರೀ ಶಂಭು ಬನ್ನಾಡಿ (ಭಂಡಾರ್‌ಕಾರ್ಸ್ ಕಾಲೇಜ್) ಕಾರ್ಯದರ್ಶಿಯಾದಿ ಶ್ರೀ ರಘುರಾಮ ಶೆಟ್ಟಿ (ಭ. ಕಾ.) ಉಪಾಧ್ಯಕ್ಷರಾಗಿ ಶ್ರೀ ಶಿವರಾಂ (ಜೂನಿಯರ್ ಕಾಲೇಜ್) ಉಪಾಧ್ಯಕ್ಷೆಯಾಗಿ ಕು॥ ಯಶೋಧ (ಭ. ಕಾ.) ಜೊತೆ ಕಾರ್ಯದರ್ಶಿಯಾಗಿ ಶ್ರೀ ಕೃಷ್ಣಶೆಟ್ಟಿಗಾರ್ (ಕೋಟೇಶ್ವರ ಹೈಸ್ಕೂಲ್) ಜೊತೆಕಾರ್ಯದರ್ಶಿನಿಯಾಗಿ ಕ.॥ ವಸಂತಿ (ಭ. ಕಾ.) ಸಮಿತಿ ಸದಸ್ಯರುಗಳು:ದಿ-ರಾಜೀವಶೆಟ್ಟಿ, ಸುರೇಶ ಆನಗಳ್ಳಿ, ಮುರಳೀಧರ ಉಡುಪ, ಸುರೇಶ ಕೊಳ್ಳ, ರಾಜಶೇಖರ್ ಹಂದೆ, ಮಹಮದ್, ಚಂದ್ರಶೇಖರ್ ಶೆಟ್ಟಿ, ಅನ್ವರ್, ಕೆ. ಸುರೇಶ್, ಜಲಜಾಕ್ಷಿ ಇವರನ್ನು ಆರಿಸಲಾಯ್ತು.

ಸಭೆಯಲ್ಲಿ ಪ್ರತಿ ಶಾಲೆಕಾಲೇಜುಗಳಲ್ಲಿ ಎಸ್. ಎಫ್. ಐ. ಘಟಕಗಳನ್ನು ಆರಂಭಿಸಲು ನಿರ್ಧರಿಸಲಾಯಿತು ಭಂಡಾರ್‌ಕಾರ್ಸ್ ಕಾಲೇಜ್ ಮತ್ತು ಸರಕಾರಿ ಜೂನಿಯರ್ ಕಾಲೇಜ್ ಸಮಿತಿಗಳನ್ನು ರಚಿಸಲಾಯಿತು 18-9-1980ರಂದು ಕುಂದಾಪುರದಲ್ಲಿ ಎಸ್. ಎಫ್. ಐ. ಮತ್ತು ಡಿ ವೈ. ಎಫ್. ನೇತೃತ್ವದಲ್ಲಿ "ಅಸ್ಸಾಂ ಪ್ರತಿಗಾಮಿ ಚಳುವಳಿಯನು" ಪ್ರತಿಭಟಿಸಿ ನಡೆಯಲಿರುವ ವಿದ್ಯಾರ್ಥಿ ಮತ್ತು ಯುವಜನರ ಬೃಹತ್ ಮೆರವಣಿಗೆ ಮತ್ತು ಸಾರ್ವಜನಿಕ ಸಭೆಯನ್ನು ಯಶಸ್ವಿಗೊಳಿಸಲು ನಿರ್ಧರಿಸಲಾಯಿತು. ●

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT